ಗಿರವಿಮಾಲು ಬಿಡಿಸಿದ್ದಕ್ಕೆ ಹೊಡೆತ, ಹಣವಂತರ ಹಿಂಸೆ

ಸುಮಾರು ನಾಲ್ಕು ಗಂಟೆಯಾಗಿತ್ತು. ಊರೊಳಗೆ ದಿರಿಸುಹಾಕಿದ ನಾಲ್ಕಾರು ಜನ ಬಂದರು ಜತೆಯಲ್ಲಿ ಊರವರೇ ಆದ ವೆಂಕಟಸ್ವಾಮಿ, ದಾಸಶೆಟ್ಟಿ ಅಲ್ಲದೆ ಇತರ ಕೆಲವರು ಇದ್ದರು. ಇವರೆಲ್ಲ ಬಂದದ್ದು ಯಾಕೆ ಅಂತ ಊರವರು ಚಿಂತಿಸುವಷ್ಟರಲ್ಲಿ ಅವರೆಲ್ಲ ಹಣವಂತರ ವಿರುದ್ಧ ಪಾರ್ಟಿಯವರು ಅಂತ ಸಾಬೀತಾಗಿಬಿಟ್ಟಿತು. ಗಿರವಿ ಮಾಲುಗಳನ್ನು ಬಿಡಿಸಲು ಬಂದಿರುವವರು ಅಂತ ಗೊತ್ತಾಗಿ ಹಲವಾರು ಮನೆಗಳು ಇದ್ದಕ್ಕಿದ್ದಂತೆ ಮುಚ್ಚಿಹೋದವು. ಇದ್ದುದರಲ್ಲಿ ನಡೆದ ಕಾರ್ಯದಂತೆ ಆ ಊರಲ್ಲೇ ಸುಮಾರು 10ಸಾವಿರ ರೂ.ಗಳ ಗಿರವಿ ಮಾಲನ್ನು ಬಿಡಿಸಲಾಯ್ತು. ಇಷ್ಟೆಲ್ಲ ಆಗುವಷ್ಟರಲ್ಲಿ ಕತ್ತಲಾಗಿ ಹೋಗಿತ್ತು.

ಇದು ನಡೆದದ್ದು ಹುಣಸೂರು ತಾಲ್ಲೂಕಿನ ತೊಂಡಾಳು ಗ್ರಾಮದಲ್ಲಿ. ಎ. ಸಿ, ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಇವರೆಲ್ಲ ಇದ್ದುದರಿಂದ ಜನ ತೆಪ್ಪಗಾದರು. ಗಿರವಿ ಇಡಿಸಿಕೊಂಡಿದ್ದವರೂ ಮಾತನಾಡದೆ ಮಾಲುಗಳನ್ನು ಒಪ್ಪಿಸಿದರು. ಎಲ್ಲರೂ ಹೋದ ಕೆಲವೇ ಕ್ಷಣಗಳಲ್ಲಿ ಗುಸುಗುಸು ಆರಂಭವಾಯ್ತು. ಊರಿನ ಹಲವಾರು ಪುಡಾರಿಗಳು (ಪ್ರಮುಖರು !) ಸೇರಿದರು. ಪರಿಣಾಮ: ಬೆಳಿಗ್ಗೆ ವೆಂಕಟಸ್ವಾಮಿ, ದಾಸಶೆಟ್ಟಿ, ಮತ್ತು ಶಾಂತರಾಜು ಇವರಿಗೆ ಹೆಂಗಸೊಬ್ಬಳಿಂದ ಪರಕೆಯಿಂದ ಹೊಡೆತ. ಈ ಹೆಂಗಸೂ ಹಣವಂತಳು. ಜತೆಗೆ ಗಿರವಿ ಇತ್ಯಾದಿ ಮಡಗಿಸಿಕೊಳ್ಳುವುದರಲ್ಲಿ ಎತ್ತಿದ ಕೈ.

ಹೊಡೆತ ತಿಂದ ಯುವಕರು ಹುಣಸೂರು ಹತ್ತಿದರು. ಪೋಲೀಸ್ ಕರೆತಂದರು. ಆದರೆ ಪ್ರಯೋಜನವೇನೂ ಆಗಲಿಲ್ಲ. ಹಣವಂತರ ಮುಂದೆ ಯಾವುದೂ ನಡೆಯುಲಿಲ್ಲ, ಬದಲಾಗಿ ಹಣವಂತರಿಂದ ಕಿರುಕುಳ ಹೆಚ್ಚಾಯಿತು. ಇಲ್ಲ ಸಲ್ಲದ ಆರೋಪ ಹೊರಿಸಿ ಪೋಲೀಸ್ ಸ್ಟೇಷನ್‌ಗೂ ನಡೆಸಿದರು. ಪೋಲೀಸರಿಂದ ಬಯ್ಸಿದರು. ಹುಡುಗರು ಅವರು ಇವರು ಅಲ್ಲಿ ಇಲ್ಲಿ ಅಂತ ಸುತ್ತಿದರು ಕೈಲಿ ಕಾಸಿಲ್ಲದೆ ಅಲೆದರು. ಪ್ರಯೋಜನ ಮಾತ್ರ ಸೊನ್ನೆ.

ಈಗಲೂ ಇವರ ವಿರುದ್ಧ ಇಲ್ಲದ ಅಪವಾದ ಹೊರಿಸಿ ಹಿಂಸೆ ಕೊಡುತ್ತಿದ್ದಾರೆ. ಅಲ್ಲದೆ ಇಲ್ಲಿನ ದಲಿತ ಮುಖಂಡರೆಲ್ಲ ಹಣವಂತರ ಎಂಜಲಿಗೆ ಬಲಿಯಾಗಿದ್ದಾರೆ. ಅವರೇ ಈ ಹುಡುಗರ ವಿರುದ್ಧ ನಿಂತಿದ್ದಾರೆ. ಇದು ದಲಿತೋದ್ಧಾರದ ಜಪ ಮಾಡುವ ಎಲ್ಲರಿಗೂ ತಿಳಿದಿದೆ. ಆದರೆ ಯಾರೂ ಕಿವಿ ಕೇಳದಂತೆ ಕೇಳಿದರೂ ಒಂದು ಬಗೆಯ ಉಪೇಕ್ಷೆ ಮಾಡುತ್ತಿದ್ದಾರೆ. ದಲಿತರ ಏಳ್ಗೆ ಆಗಬೇಕೆಂದು ಬಡಬಡಿಸುವ ಮಂದಿ ಅದನ್ನು ಕಾರ್ಯತಃ ಮಾಡಲು ಹೊರಟಿರುವ ಯುವಕರಿಗೆ ರಕ್ಷಣೆ ಒದಗಿಸದಿರುವುದು ಆಶ್ಚರ್ಯ. ಇಂಥ ತೊಂದರೆಗೊಳಗಾಗಿರುವ ಯುವಕರಿಗೆ, ಆಮೂಲಕ ಹಿಂಸೆಪಡುತ್ತಿರುವ ದಲಿತರಿಗೆ ಮಾನವರಾಗಿ ಬಾಳಲು ಅವಕಾಶ ಮಾಡಿಕೊಡುವ ವ್ಯವಸ್ಥೆಯನ್ನು ಕೂಡಲೇ ಒದಗಿಸಿಕೊಡಬೇಕೆಂದು 'ಪಂಚಮ' ಒತ್ತಾಯಿಸುತ್ತದೆ. *

ಪಂಚಮ

ಸಂಪುಟ : 1 | ಶುಕ್ರವಾರ, 5-8-1976 | ಬೆಲೆ : 20 ಪೈಸೆ | ಸಂಚಿಕೆ :4

ದಲಿತರಿಗೆ ಕೆಲಸ ಕೊಡದ ಸಹಕಾರ ಸಂಘ

ಸ್ವಾತಂತ್ರ್ಯದ 29ನೇ ವರ್ಷಕ್ಕೆ ಕಾಲಿಡುತ್ತಿರುವ ಇಂದು ಸರ್ಕಾರದ ಕೆಲವು ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ದೇಶದಲ್ಲಿನ ಹಿಂದುಳಿದ ಬಹುಸಂಖ್ಯಾತ ಹರಿಜನ, ಗಿರಿಜನರಿಗೆ ಶೇ. 18 ಉದ್ಯೋಗ ಮೀಸಲಾತಿಯನ್ನು ಪಾಲಿಸಿಕೊಂಡು ಬಂದಿಲ್ಲದಿರುವುದು ತಿಳಿದಂತಹ ವಿಷಯವಾದರೂ ಇಂದಿನ ಆಪತ್ಕಾಲ ಪರಿಸ್ಥಿತಿಯಲ್ಲಿ ಪ್ರತಿ ಇಲಾಖೆಗಳಲ್ಲೂ, ಸ್ಥಳೀಯ ಸಂಸ್ಥೆಗಳಲ್ಲೂ ಸಂವಿಧಾನಾತ್ಮಕವಾಗಿ ಹರಿಜನ ಗಿರಿಜನರಿಗೆ ಸಲ್ಲಬೇಕಾದ ಶೇ. 18 ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂಬ ಕೂಗು ಕೇಳಿದರೂ ಅಲ್ಲಲ್ಲಿ ಈ ಕೆಲಸ ಆಗುತ್ತಿಲ್ಲದಿರುವುದು ವಿಷಾದದ ಸಂಗತಿ.

ಮಳವಳ್ಳಿ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರುಕಟ್ಟೆ ಸಂಘವು ಈ ಎರಡುವರ್ಷಗಳ ಹಿಂದೆ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿತು. ಕೋಟ್ಯಾಂತರ ರೂ, ಬಂಡವಾಳ ಹೊಂದಿ ವಿವಿಧ ಶಾಖೆಗಳನ್ನು ತೆರೆದು ಅಭಿವೃದ್ಧಿಯಲ್ಲಿರುವ ಈ ಸಹಕಾರ ಸಂಘದಲ್ಲಿ ಹರಿಜನ ಗಿರಿಜನರಿಗೆ ಯಾವ ಹುದ್ದೆಯನ್ನು ಕೊಟ್ಟಿಲ್ಲ.

ಈ ಸಂಸ್ಥೆಯಲ್ಲಿ ಹರಿಜನ ಗಿರಿಜನರಿಗೆ ಶೇ. 18. ಉದ್ಯೋಗ ಅವಕಾಶ ಕಲ್ಪಿಸಿಕೊಡಬೇಕೆಂದು ಈ ಎರಡು ವರ್ಷಗಳ ಹಿಂದೆ ಸ್ಥಳೀಯ ನಾಯಕರು ಮತ್ತು ರಾಜ್ಯದ ಶಿಕ್ಷಣಮಂತ್ರಿಗಳಾದ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಯವರಿಗೆ ಈ ಬಗ್ಗೆ ಮನವಿ ಸಲ್ಲಿಸಿದರೂ ಕೂಡ ಯಾವ ಪ್ರಯೋಜನ ಕಂಡುಬಂದಿಲ್ಲ.

ಈ ಸಂಸ್ಥೆಯ ಆಡಳಿತ ನೌಕರರ ಸಂಖ್ಯೆ ಈ ರೀತಿ ಇದೆ: 1ನೇ ದರ್ಜೆಯ ನೌಕರರು 4, 2ನೇ ದರ್ಜೆಯ ನೌಕರರು 14, 4ನೇ ದರ್ಜೆಯ ನೌಕರರು 12, ಕಾವಲುಗಾರರು

(4ನೇ ಪುಟಕ್ಕೆ)

ದುದ್ದಾದ ಹರಿಜನರ ಮೇಲೆ ಹಲ್ಲೆ

(ವರದಿ : ಶಿವಣ್ಣ-ಹೆಬ್ಬಾಲೆ)

ಈಗ್ಗೆ ಕೆಲವು ದಿನಗಳ ಹಿಂದೆ ಹಾಸನ ತಾಲ್ಲೂಕು ದುದ್ದ ಗ್ರಾಮದ ಸವರ್ಣೀಯರು ಅಲ್ಲಿನ ಹರಿಜನರ ಮೇಲೆ ಹಲ್ಲೆ ನಡೆಸಿ ಹಲವಾರು ರೀತಿಯಲ್ಲಿ ಕಿರುಕುಳ ಕೊಡುತ್ತಿರುವ ಪ್ರಸಂಗ ತಿಳಿದುಬಂದಿದೆ. ಇಲ್ಲಿನ ಹರಿಜನರಿಗೇ ಪ್ರತ್ಯೇಕವಾಗಿರುವ ಶ್ರೀ ಕರೀಬೀರೇಶ್ವರ ದೇವಾಲಯದಲ್ಲಿ ಇದ್ದ ಬೆಲೆಬಾಳುವ ವಿಗ್ರಹ, ಮತ್ತು ಸುಮಾರು 5-6 ಸಾವಿರ ಬೆಲೆ ಬಾಳುವ ಧರಿಸುವ ಒಡವೆಗಳನ್ನು ಅಲ್ಲಿದ್ದ ಹರಿಜನ ಅರ್ಚಕರ ಮೇಲೆ ಸವರ್ಣೀಯರು ಹಲ್ಲೆ ನಡೆಸಿ ಎಲ್ಲವನ್ನೂ ದೋಚಿದ್ದಾರೆ. ಮತ್ತು ಕೆಲವು ಕೆಲವು ಹರಿಜನರಿಗೆ ಇನಾಮಾಗಿ ಬಂದಿರುವ ಆಸ್ತಿಗಳನ್ನೂ ಯಾವ ಹಕ್ಕೂ ಇಲ್ಲದೆ ಸ್ವಾಧೀನಪಡಿಸಿಕೊಂಡಿರುವರು. ಹರಿಜನರ ಗದ್ದೆಯಲ್ಲಿ ಇನ್ನೂ ಕಟಾವಿಗೆ ಬಾರದ ಪೈರನ್ನೆಲ್ಲಾ ಕುಯ್ದು ಲೂಟಿ ಮಾಡಿ ಸಾವಿರಾರು ರೂ. ಗಳಷ್ಟು ನಷ್ಟವನ್ನುಂಟು ಮಾಡಿದ್ದಾರೆ. ಹಾಗೂ ಪಕ್ಕದ ಹಳ್ಳಿಗಳಿಗೆ ಕೂಲಿ-ಕಂಬಳಕ್ಕಾಗಿ ಹೋಗುವ ಹರಿಜನ ಹೆಂಗಸರು ಮತ್ತು ಮಕ್ಕಳನ್ನು ಬಹಳ ಹೀನವಾಗಿ ಬಯ್ದು ಗುಂಪುಗೂಡಿ ಹಲವಾರು ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ. ಈ ರೀತಿಯಾಗಿ ಅಲ್ಲಿನ ಸವರ್ಣೀಯರು ಹರಿಜನರ ನಿತ್ಯ ಬಾಳ್ವೆಗೆ ಪ್ರಾಣಭೀತಿಯನ್ನುಂಟುಮಾಡಿ ಅವರ ಅಲ್ಲಿ ಬದುಕುವುದೇ ಕಷ್ಟವಾಗಿ ಕಾಣುತ್ತದೆ. ಆಗಾಗ್ಗೆ ಹರಿಜನರ ಮನೆಗಳ ಮೇಲೆ ಕಲ್ಲು ಹೊಡೆಯುವುದು, ಅವಕಾಶ ಸಿಕ್ಕಾಗ ಅವರ ಮನೆಗಳಿಗೆ ನುಗ್ಗಿ ಸಾಮಾನು, ಹಣ ಎಲ್ಲವನ್ನೂ ಅಪಹರಿಸುತ್ತಲಿದ್ದಾರೆ. ಹರಿಜನರಲ್ಲೂ ಕೆಲವು ವಿದ್ಯಾವಂತರಿದ್ದರೂ ಸಹ ಅವರು ಸವರ್ಣೀಯರಿಗೆ ಹೆದರಿ ಸುಮ್ಮನಿದ್ದಾರೆ. ಈ ವಿಚಾರವಾಗಿ ಸಂಭಂದಪಟ್ಟ ಸ್ಥಳೀಯ ಪೋಲೀಸ್ ಆಫೀಸರ್, ಜಿಲ್ಲಾ ಪೋಲೀಸ್ ಆಫೀಸರ್, ಮುಖ್ಯಮಂತ್ರಿ ಮತ್ತು ಐ. ಜಿ. ಪಿ. ಇವರುಗಳಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಕೊಟ್ಟು ಕಾಯ್ದಿದ್ದಾರೆ. ಈವರೆಗೆ ಯಾರಿಂದಲೂ ಪ್ರತಿಕ್ರಿಯೆ ಇಲ್ಲ. ಇವರನ್ನೇ ನಂಬಿರುವ ದಲಿತರು ಹತಾಶರಾಗಿದ್ದಾರೆ. ●

ಕೊಡುಗೆ : ಶಿ. ಮು. ಸಾಮಂತ್

ನೆಲೆ ಇಲ್ಲದ ದಲಿತ ವಿದ್ಯಾರ್ಥಿಗಳು

ಮೈಸೂರಿನಲ್ಲಿ, ಮೈಸೂರು ವಿ. ವಿ. ನಿಲಯಕ್ಕೆ ಸೇರಿದಂತೆ ನಾಲ್ಕೈದು ಹಾಸ್ಟೆಲುಗಳಿವೆ. ಅಲ್ಲಿ ಸೀಟು ಸಿಗಬೇಕಾದರೆ ಪರ್ಸೆಂಟೇಜು ಹೆಚ್ಚಿರಬೇಕು. ಅಂದರೆ ಯಾವುದೇ ಕಾರಣಕ್ಕೆ ಕಡಿಮೆ ಅಂಕ ಬಂದರೂ ಅಂತವರಿಗೆ ಅಲ್ಲಿ ಸೀಟು ಸಿಗುವುದಿಲ್ಲ. ಇಂಥ ಲಿಸ್ಟಲ್ಲಿ ಸಿಕ್ಕಿನರಳುವವರು ಹೆಚ್ಚಾಗಿ ದಲಿತ ವಿದ್ಯಾರ್ಥಿಗಳೇ. ಸಾಮಾಜಿಕವಾಗಿ ಆರ್ಥಿಕವಾಗಿ ಮೊದಲೇ ಹಿಂದುಳಿದ ದಲಿತ ವಿದ್ಯಾರ್ಥಿಗಳು ಅಂಕಗಳ ಗಳಿಕೆಯಲ್ಲಿ ಮುಂದಕ್ಕೆ ಬರುವುದಾದರು ಹೇಗೆ ?

ದೂರದೂರುಗಳಿಂದ ಕೈಲಿ ಪುಡಿಗಾಸು ಹಿಡಿದು ಬಂದ ದಲಿತ ವಿದ್ಯಾರ್ಥಿಗಳು ಇಲ್ಲಿ ಸೀಟು ಸಿಕ್ಕದೆ, ನಿಲ್ಲಲು ನೆಲೆಯಿಲ್ಲದೆ ಬೀದಿ ಬೀದಿ ಅಲೆಯುವಂತಾಗಿದೆ. ತಂದ ಪುಡಿಗಾಸು ಖರ್ಚಾದ ಮೇಲೆ ಮುಖ ಒಣಗಿಸಿಕೊಂಡು ಹಿಂದಿರುಗುವುದಷ್ಟೇ ಬಾಕಿ ಉಳಿದಿದೆ. ಇಂಥ ಸ್ಥಿತಿಯಲ್ಲಿದ್ದರೂ ನಮಗೆ ಯಾವರೀತಿಯ ಸಹಾಯವೂ ಇಲ್ಲದಂತಾಗಿದೆ.

ಮೈಸೂರಿನಲ್ಲಿ ದಲಿತ ವಿದ್ಯಾರ್ಥಿಗಳಿಗಾಗೇ ಸೀಮಿತವಾಗಿರುವ ಹಾಸ್ಟೆಲೊಂದರಲ್ಲೂ ಇದೇ ವ್ಯವಹಾರವಾಗಿ ದಲಿತ ವಿದ್ಯಾರ್ಥಿಗಳು ದಾರಿಕಾಣದೆ ಚಿಂತಿಸುವಂತಾಗಿದೆ. ಸಂಬಂಧ ಪಟ್ಟವರು ಆದಷ್ಟು ಬೇಗ ಇತ್ತ ಗಮನ ಹರಿಸಿ ದಲಿತ ವಿದ್ಯಾರ್ಥಿಗಳ ಕಷ್ಟವನ್ನು ಪರಿಹರಿಸಬೇಕಾಗಿ ಕೋರುತ್ತೇನೆ,

-ಎಚ್. ಶಿವಲಿಂಗಪ್ಪ

ಮಹಾರಾಜಕಾಲೇಜು, ಮೈಸೂರು-೬

○

ತೀವ್ರ ಕ್ರಮ ಕೈಕೊಳ್ಳಲಿ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಭೂಸುಧಾರಣಾ ಕ್ರಮೂನಿನನ್ವಯ ಹಲವಾರು ಹರಿಜನರು ಡಿಕ್ಲರೇಷನ್ ಕೊಟ್ಟು ಸುಮಾರು ಮೂರು ತಿಂಗಳಿಗೇ ಬಂತು. ಆದರೂ ಇದುವರೆಗೆ ಯಾವ ಸುದ್ದಿಯೂ ಇಲ್ಲದಂತಾಗಿದೆ. ಈ ಕುರಿತು ಅಸಿಸ್ಟೆಂಟ್ ಕಮಿಷನರ್‌ರವರ ಹತ್ತಿರ ಹೋಗಿ ವಿಚಾರಿಸಿಯೂ ಆಯಿತು. ಆದರೂ ಯಾವ ಪ್ರಯೋಜನವೂ ಆಗಲಿಲ್ಲ. ಆದುದರಿಂದ ಇಲ್ಲಿನ ಹರಿಜನರಿಗೆ ಇದರಿಂದ ಬಹಳ ತೊಂದರೆಯಾಗಿದೆ.

ಸರ್ಕಾರ ಘೋಷಿಸಿರುವ ೨೦ ಅಂಶಗಳ ಕಾರ್ಯಕ್ರಮ ಹೀಗೆ ವಿಳಂಬವಾಗುತ್ತಿರುವುದರ ಕಾರಣವೇನೆಂದು ತಿಳಿಯುತ್ತಿಲ್ಲ. ಅಲ್ಲದೆ, ಈ ಉಪಯೋಗ ಹಲವಾರು ಜನ ಸವರ್ಣೀಯರಿಗೆ ಈಗಾಗಲೇ ದೊರೆತಿದೆ. ಹೀಗಾಗಿ ಮಳವಳ್ಳಿ ತಾಲ್ಲೂಕಿಗೆ ಸೇರಿದ ಅತಿ ಹೆಚ್ಚು ಮಂದಿ ಹರಿಜನರು ಬವಣೆ ಪಡುವಂತಾಗಿದೆ. ಆದುದರಿಂದ ಸಂಬಂಧ ಪಟ್ಟವರು ಇತ್ತ ಗಮನ ಹರಿಸಿ ಬಡ ಹರಿಜನರನ್ನು ಇಂಥ ಕಷ್ಟದಿಂದ ಪಾರುಮಾಡಬೇಕಾಗಿ ಅರಿಕೆ. ಅಲ್ಲದೆ ಕೆಲಸ ಕಾರ್ಯಗಳು ಹೀಗೆ ವಿಳಂಬವಾಗದಂತೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

-ಎಚ್. ಮಾಚಯ್ಯ

ಹಿಟ್ಟನಹಳ್ಳಿಕೊಪ್ಪಲು, ಮಳವಳ್ಳಿ ತಾಲ್ಲೂಕು

ಗುಡಿಗೆಂದು ಹೋದ-ದಂಡ ಕೊಟ್ಟ

ಮಂಡ್ಯ ಜಿಲ್ಲೆಯ ಚೋಕನಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಹರಿಜನ ಯುವಕನೊಬ್ಬ ದೇವರ ಗುಡಿಯೊಳಗೆ ಪೂಜೆಮಾಡಿಸಲು ಬಂದನೆಂಬ ಅಪಾದನೆಯ ಮೇಲೆ, ಆ ಯುವಕನೊಳಗೊಂಡು ಪಕ್ಕದ ನಾಲ್ಕಾರು ಊರಿನ ಹರಿಜನರಲ್ಲದ ಮುಖಂಡರು ಸೇರಿಕೊಂಡು, ಆ ಯುವಕನಿಗೆ 200ರೂ. ದಂಡ ಕೊಡಲು ಕೇಳಿದರು. ಅದಕ್ಕೆ ಆ ಯುವಕ ಹೆದರಿ ಕಾಡಿ ಬೇಡಿ, 50ರೂ. ದಂಡ ಕೊಟ್ಟ. ಆದರೆ ಈ ವಿಷಯ, ಇಲ್ಲಿಯ ವರೆಗೆ ಬಹಿರಂಗವಾಗಿರಲಿಲ್ಲ. ಸುಮಾರು 40 ದಿನಗಳ ಹಿಂದೆ ನಡೆದ ಘಟನೆ ಈಗ ಬಹಿರಂಗವಾದರೂ ಯಾವ ತನಿಖೆಯೂ ನಡೆಯದೆ ಇರುವುದು ಸೋಜಿಗದ ಸಂಗತಿಯಾಗಿದೆ.

-ಸುಂಡನಹಳ್ಳಿ ನಾಗರಾಜು.

781, ಸ್ವರ್ಣಸಂದ್ರ, ಮಂಡ್ಯ-2.

ಅಳಲು

ಹಾಲು ಮತ್ತು ಅಸ್ಪೃಶ್ಯತೆ

ಹಸುವಿನ, ಎಮ್ಮೆಯ ಎದೆಯಿಂದ ಬರುವ ಬಿಸಿಬಿಸಿ ಹಾಲಿಗೂ ಅಸ್ಪೃಶ್ಯತೆಗೂ ಎಲ್ಲಿಯಾದರೂ ಸಂಬಂಧ ಉಂಟೆ ? ನಕ್ಕಾರು ಜನ ! ಆದರೆ ಉಲುಕುಂದದ ಹರಿಜನರು ಈ ಮಾತಿಗೆ ನಗುವುದಿಲ್ಲ: ನಿಟ್ಟುಸಿರು ಬಿಡುತ್ತಾರೆ. ನಾವು ಬದುಕುವುದು ಇನ್ನು ಯಾವ ರೀತಿ ಎಂದು ಹತಾಶರಾಗುತ್ತಾರೆ.

ರಾಮದುರ್ಗದಿಂದ 15 ಮೈಲು ಹೋದರೆ ಉಲಕುಂದ ಸಿಕ್ಕುತ್ತೆ. ಇಲ್ಲಿ ಹೊಟ್ಟೆ ತುಂಬಿಸಿಕೊಳ್ಳಲು ದಾರಿಕಾಣದ ಹರಿಜನರೇ ಜಾಸ್ತಿ ಮಂದಿ. ಇತ್ತೀಚೆಗೆ ಘನಸರ್ಕಾರ 'ತೆನೆಎಮ್ಮೆ', 'ತೆನೆಹಸು'ಗಳ ರೂಪದಲ್ಲಿ ಇವರಿಗೆ 'ಸಹಾಯ' ಮಾಡಿತು. ಇವರಿಗೊ ಖುಸಿಯೊ ಖುಸಿ. ಇನ್ನು ನಾವು ಬದುಕಿದೆವು ಎನ್ನುವ ಆಶೆ ಕಣ್ಣು ತುಂಬ. ಇಲಾತಿ ಎಮ್ಮೆಗಳಿಗೆ ಹಸಿರು ಹುಲ್ಲಾಕಿ ಮೆಯಿಸಿದ್ದೇ ಮೇಯಿಸಿದ್ದು. ಎಮ್ಮೆಗಳು ತಿಂದವು. ಕೊಬ್ಬಿದವು. ಕರುಹಾಕಿದವು. ಕೆಚ್ಚಲುತುಂಬ ಹಾಲು. ಕರೆಯುತ್ತಾ ಹೋದಂತೆ ಹಂಡೆಗಳು ತುಂಬಿದವು. ಹರಿಜನರ ಸಂತೋಷಕ್ಕೆ ಪಾರವೇ ಇರಲಿಲ್ಲ. 'ಸಹಾಯ' ಮಾಡಿದ ಸರ್ಕಾರಕ್ಕೆ ಕೈಮುಗಿಯುತ್ತ, ಬಿಸಿಬಿಸಿ ಹಾಲು ಹಿಡಿದು ಬೀದಿಬೀದಿಗಳಿಗೆ ನುಗ್ಗಿದರು - ಮಾರಲು. ಎದೆ ಧಸಕ್ಕೆಂದಿತು. 'ಅದೂ ಹೊಲೆಮಾದಿಗರ ತವ...'ಎಲ್ಲಾ ನಗುವವರೆ. ? ಮಾರುವ ಹಾಲು ತಣ್ಣಗಾಯಿತು. ಹಂಡೆಗಟ್ಟಲೆ ಹಾಲನ್ನು ಏನು ಮಾಡಬೇಕು? ಯಾರಿಗೆ ಮಾರಬೇಕು ? ಹೊಳೆಯಲಿಲ್ಲ. ... 'ನಮ್ಮ ಬದುಕೊ ?'

ಕಿತ್ತು ತಿನ್ನುತ್ತಿರುವ-ಈ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ ಇಲ್ಲಿನ ಹರಿಜನರಿಗೆ.

-ಮಲ್ಲಿಕಾರ್ಜುನಸ್ವಾಮಿ,

ರಾಮದುರ್ಗ, ಬೆಳಗಾವಿ ಜಿಲ್ಲೆ.

....

ನ್ಯಾಯಕ್ಕಾಗಿ ನಮ್ಮ ಆಗ್ರಹ, ಕಳಕಳಿ; ಮಾನವೀಯತೆಗಾಗಿ ನಮ್ಮ ಹೋರಾಟ; ಸಮಾನತೆಗಾಗಿ ನಮ್ಮ ಬಿಗಿಮುಷ್ಠಿ.

-ಬೋಯಿ ಭೀಮನ್ನ

ಬದಲಾಗದ ಹೋಟೆಲುಗಳು

ಒಂದು ವರ್ಷಕ್ಕೆ ಹಿಂದಿನ ಮಾತು: ನಮ್ಮೂರು (ತಲಕಾಡು) ಇರುವ ಏಳೆಂಟು ಹೋಟೆಲುಗಳಿಗೆ ಹರಿಜನರ ಪ್ರವೇಶವಿಲ್ಲ. ಇವರಿಗೆಂದೇ ಹೋಟೆಲು ಹೊರಗೆ ಸಪರೇಟು ಜಾಗ, ಸಪರೇಟು ಲೋಟ. ಸಪರೇಟು ಮಾತು ಇತ್ತು. ಆಷ್ಟೆ. ಇಷ್ಟರಲ್ಲಿ ದೇಶದಲ್ಲಿ ಎಮರ್ಜನ್ಸಿ ಬಂತು. ೨೦ ಅಂಶದ ಕಾರ್ಯಕ್ರಮ ಬಂತು. ಇವು ನಮ್ಮೂರಿಗೂ ಬಂದವು. 'ಹರಿಜನರಿಗೆ ಅನುಕೂಲ' ಎಂದು ಎಲ್ಲಕಡೆ ಕೇಳಿಸಿತು. ಅಧಿಕಾರಿಗಳು ಬಂದು 'ಹೋಟೆಲು ನುಗ್ಗಿ' ಎಂದರು. ಗಲಾಟೆ ಆಯ್ತು. ಅಂತೂ ಹರಿಜನರು ಹೋಟೆಲು ನುಗ್ಗಿದರು. ಕಾಫಿ ಕುಡಿದರು.

ಇದೆಲ್ಲಾ ನಡೆದು ವರ್ಷವಾಗುತ್ತಾ ಇದೆ. ಈಗ ವರ್ಷಕ್ಕೆ ಇದೇಮಾತು: ಇರುವ ಹೋಟೆಲುಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲ. ಅವರಿಗೆಂದೇ ಇಟ್ಟ ಸಪರೇಟು ಜಾಗ, ಲೋಟ. ಮಾತು. ಆಶ್ಚರ್ಯವೆಂದರೆ ಈಗಲೂ ದೇಶದಲ್ಲ ಎಮರ್ಜನ್ಸಿ ಇದೆ. 20 ಅಂಶದ ಕಾರ್ಯಕ್ರಮ ಇದೆ. ಅಂದು 'ಹೋಟೆಲು ನುಗ್ಗಿ' ಎಂದ ಅಧಿಕಾರಿಗಳು ಇಂದು ಮಾತೇ ಇಲ್ಲ. 'ಹೋಟೆಲು ನುಗ್ಗ ಬಹುದು' ಎಂದು ಇನ್ನೂ ಧೈರ್ಯ ಉಳಿಸಿಕೊಂಡ ಸುಮಾರು ಹರಿಜನ ಯುವಕರನ್ನು ಹೋಟೆಲಿನವರ ಕೆಂಗಣ್ಣು, ಕೆಟ್ಟಮಾತು ಧೈರ್ಯ ಕೆಡಿಸಿದೆ. ಅಂದರೆ ಅಂದು ಅಧಿಕಾರಿಗಳು 'ಹೋಟೆಲು ನುಗ್ಗಿ' ಎಂದುದು ಬರಿ ಬಾಯುಪಚಾರಕ್ಕೋ ಅಥವಾ.... ?

-ಕೆಂಪಯ್ಯ

ತಲಕಾಡು, ಟಿ. ನರಸಿಪುರ ತಲ್ಲೋಕು

ಅಂಬೇಡ್ಕರ್ ಹೇಳಿದ್ದು

ರಾಜಕೀಯವಾಗಿ ಗಾಂಧಿಯನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಗಾಂಧಿಯನ್ನು ನಾನು ನಂಬುವುದಿಲ್ಲ. ದಲಿತ ವರ್ಗಗಳ ಜನಜೀವನಕ್ಕೆ ಗಾಂಧಿ ಇಷ್ಟು ಒಳಿತು ಮಾಡಬಹುದು ಎಂಬುದರಲ್ಲಿ ನನಗೆ ಕಿಂಚಿತ್ತೂ ನಂಬಿಕೆ ಇಲ್ಲ. ದಲಿತರ ಬಗೆಗೆ ಗಾಂಧಿಯಲ್ಲಿ ನಿಜವಾದ ಸಹಾನುಭೂತಿ ಇದ್ದರೆ ಮುಂಬೈ ಹಾಗೂ ಕೇಂದ್ರ ಪ್ರಾಂತ್ಯಗಳ ಮುಖ್ಯಮಂತ್ರಿಗಳನ್ನು ಭೇಟಿಮಾಡಿ, ಆಯಾ ಮಂತ್ರಿಮಂಡಲಗಳಲ್ಲಿ ದಲಿತ ವರ್ಗಗಳಿಗೆ ಪ್ರಾತಿನಿಧ್ಯ ಕೊಡುವಂತೆ ಏಕೆ ಕೇಳಲಿಲ್ಲ ? ಮುಂಬೈ ಕಾಂಗ್ರೆಸ್ ಸರಕಾರ ಭೂಕಂದಾಯವನ್ನು ಇಳಿಸಲಿಲ್ಲ. ಅಥವಾ ಶ್ರೀಮಂತರಿಂದ ಹೆಚ್ಚು ತೆರಿಗೆ ವಸೂಲು ಮಾಡುವಂಥ ನೀತಿಯನ್ನಾದರೂ ಜಾರಿಗೆ ತರಲಿಲ್ಲ. ಹಿಂದಿನ ಸರ್ಕಾರ ದಲಿತರಿಗೆ ಇಷ್ಟು ಬಂಜರು ಭೂಮಿನ್ನಾದರು ಕೊಟ್ಟಿತ್ತು. ಅಷ್ಟು ಮಾತ್ರವಲ್ಲ; ಪೋಲಿಸ್ ಇಲಾಖೆಗಳಲ್ಲಿ ದಲಿತ ವರ್ಗಗಳನ್ನು ನೇಮಕ ಮಾಡಿಕೊಳ್ಳುವುದರ ಜೊತೆಗೆ, ಸರಕಾರಿ ಉದ್ಯೋಗ ರಂಗಗಳಲ್ಲಿ ಕೆಲವೊಂದು ಸ್ಥಾನಗಳನ್ನು ಮೀಸಲಿರಿಸಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಆ ಜನರತ್ತ ತಿರುಗಿಯೂ ನೋಡಲಿಲ್ಲ. (ಅಂಬೇಡ್ಕರರ 'ಗಾಂಧಿ ಅಂಡ್ ಗಾಂಧಿಇಸಂ' ಪುಸ್ತಕದಿಂದ ಅನು : ಮ.ನ.ಜ)

....

ಪ್ರಕಟಣೆ

'ಪಂಚಮ'ವು ಪ್ರಕಟಣೆಗಾಗಿ ದಲಿತರ ಸಮಸ್ಯೆಗಳನ್ನು ಕುರಿತ ವಿಚಾರಾತ್ಮಕ ಲೇಖನ, ಕವನಗಳನ್ನು ಆಹ್ವಾನಿಸುತ್ತದೆ. ಲೇಖನ ಮಾಮೂಲಿ ಬಿಳೀ ಹಾಳೆಯಲ್ಲಿ ಒಂದು ಅಥವ ಎರಡು ಪುಟಕ್ಕೆ ಮೀರದಂತಿದ್ದು ಹಾಳೆಯ ಒಂದೇ ಮಗ್ಗುಲಿಗೆ ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಲೇಖಕರ ವಿಳಾಸ ಸಹಿ ಹೊಂದದ ಲೇಖನಕ್ಕೆ ಪ್ರಕಟಣೆಯ ಅವಕಾಶವಿಲ್ಲ. ಕವನ ಆದಷ್ಟು ಚಿಕ್ಕವಿದ್ದರೆ ಒಳ್ಳೆಯದು.

-ಸಂಪಾದಕ

ದಲಿತ ರಾಗ

ಹಂಚಿದೆವು ನಾವು
ಮೈಮಾಂಸ ತುಕುಡ ತುಕುಡ ಮಾಡಿ
ಹಂಚಿ ಬಿಟ್ಟೆವು.
ನಮ್ಮಕ್ಕ ತಂಗಿಯರ, ನಮ್ಮಣ್ಣ ತಮ್ಮದಿರ
ನಮ್ಮವ್ವ ಅಪ್ಪದಿರ ಮೈಮೂಳೆ ಮುರಿದು
ನುಗ್ಗಿ ಹುರಿಗಾಳು ಮಾಡಿಕೊಟ್ಟೆವು.

ಬಸಿದು ಬಿಸಿನೆತ್ತರ ಬೀರು ಬ್ರಾಂದಿಯ
ಮಾಡಿಕೊಟ್ಟೆವು.
ಬಿಡಿಸಿ ನರ ನರವ ಒಳ್ಳೆ ಬಿನ್ನಿ ಬಟ್ಟೆಯ
ನೆಯ್ದು ಕೊಟ್ಟೆವು.
ಹಸನಾದ ಮೈದೊಗಲ ಹರಿದು ಕೆರವ
ಹೊಲೆದು ಕೊಟ್ಟೆವು.
ಖಂಡ ಖಂಡವ ಕೂದು ಕೆಂಪು ಕೆಸರಲಿ
ಕಲೆಸಿ ಮಹಡಿಗಳ ಕಟ್ಟಿ ಕೊಟ್ಟೆವು.

ಮೈ ಬಡಿದು ರಸಕರೆದು ಬೆವರ ನೀರಾಗಿ
ಹರಿಸಿ ಭಾರಿ ಭಾರಿ ಕಣಜಗಳ ತುಂಬಿಸಿದೆವು
ತಟ್ಟೆದತ್ತಲೆ ತಿರುಗಿ ತಿರುಗು ಮುರುಗಾಗಿಯೆ
ತಿದ್ದಿದೆವು.
ಕಪ್ಪು ಮಣ್ಣನು ಅಗೆದು, ಕಣ್ಣೀರ ತೆಗೆದು
ತರತರದ ಸೋಪು ಹಚ್ಚಿ ಚೆನ್ನಾಗಿ
ಮೀಯಿಸಿದೆವು.

ಇಷ್ಟೆಲ್ಲ ಮಾಡಿದೆವು ಆದರೂ
ನಮ್ಮ ಹೊಟ್ಟೆ ಖಾಲಿ, ಕೈ ಕೆಸರು
ಮೈ ಹೊಲಸು
ನಿಮ್ಮ ತಟ್ಟೆದ ನಾವು ನಮ್ಮ ತಟ್ಟೆ
ಕೊಳದಾದೆವು
ನಮ್ಮೊಡಲ ಅಣುವೆಲ್ಲ ನಿಮ್ಮ
ಪ್ರಯೋಗಾಲಯದಲ್ಲಿ
ನಿಮ್ಮ ಮೈ ಕೊಬ್ಬಿಸಲು ಸಿಡಿದು
ಮಾಯವಾದವು.
ಕೆಲವು ಕರಗಿ ಹೋದವು.
ಈಗ ಇದೋ ನಮ್ಮದೇ ಒಂದು
ಪ್ರಯೋಗಾಲಯ
ಹಸಿದ ನಮ್ಮೊಡಲ ತುಂಬಿಸಲು
ಮುರಿದ ಮೈ ಮೂಳೆ ರಕ್ಷಿಸಲು
ಸುರಿವ ಬಿಸಿ ರಕ್ತ ನಿಲ್ಲಿಸಲು
ಕೂದ ಖಂಡ ಖಂಡವ ತುಂಬಿಸಲು
ಇಲ್ಲಿ ನಮ್ಮೊಡಲ ಅಣುವ
ಸಿಡಿಸುತ್ತೇವೆ.
ನಿಮ್ಮ ಸೋಂಕು ನಮಗೆ ಬೇಡ
ನಿಮ್ಮ ಸುಖದ ಸುಪ್ಪತ್ತಿಗೆ ಕಾಯುವ
ಬಾಗಿಲ ನಾಯ ಕೆಲಸ ನಮಗೆ ಬೇಡ
ನೀವೇರುವ ಮೆಟ್ಟಲುಗಳ ಇಟ್ಟಿಗೆ
ಗಳಾಗುವುದು ನಮಗೆ ಬೇಡ.

ನಮ್ಮ ಪ್ರಯೋಗಾಲಯದಲ್ಲಿ
ನಾವೇ ಸಿಡಿಸಿದ
ನಮ್ಮೊಡಲ ತಾಜಾ ಅಣುವಿಂದ
ನಾವೂ ಬದುಕುತ್ತೇವೆ
ನಮ್ಮದೇ ರಾಗದಲಿ ನಮ್ಮ ಹಾಡ
ಹಾಡುತ್ತೇವೆ.

—ಇಂದೂಧರ ಹೊನ್ನಾಪುರ

ಮಾನವತಾ ಮದುವೆ ವೇದಿಕೆ

ನಮ್ಮ ದೇಶದಲ್ಲಿ ಮನುಷ್ಯ ಮನುಷ್ಯರ ನಡುವೆ ಮದುವೆಯಾಗುವುದು ಅಪರೂಪವೆನ್ನಬಹುದು. ನಮ್ಮ ದೇಶದಲ್ಲಿ ಜಾತಿಗೆ ಮದುವೆ ಆಗುತ್ತವೆ; ಹಣಕ್ಕೆ ಮದುವೆ ಆಗುತ್ತವೆ; ಅಂತಸ್ತಿಗೆ ಮದುವೆ ಆಗುತ್ತವೆ; ಗೌರವಕ್ಕೆ ಮದುವೆ ಆಗುತ್ತವೆ. ಆದರೆ ಮನುಷ್ಯ ಮನುಷ್ಯರ ನಡುವೆ ಮದುವೆ ಆಗುವುದು ಅಪರೂಪ.

ಹೀಗಿದ್ದೂ ಅಲ್ಲೊಂದು ಇಲ್ಲೊಂದು ಅಂತರ್‌ಮತೀಯ, ಅಂತರ್‌ಜಾತೀಯ, ಸಂಪ್ರದಾಯ ವಿರೋಧಿ, ಸರಳ, ವರದಕ್ಷಿಣೆರಹಿತ ಮದುವೆಗಳು ಜರುಗುತ್ತಲೂ ಇವೆ. ಇಂಥವಕ್ಕೆಲ್ಲ ನಮ್ಮ ಸಮಾಜದಲ್ಲಿ ಇರುವ ಅಡ್ಡಿ ಆತಂಕಗಳು ನೂರಾರು. ಆದ್ದರಿಂದ ವಿಚಾರವಂತರು, ಪ್ರಗತಿಪರರು ಮೇಲ್ಕಂಡಂಥ ವಿವಾಹಗಳಿಗೆ ಬೆಂಬಲಿಸಬೇಕು, ಬೆಂಬಲಿಸಿದರಷ್ಟೇ ಸಾಲದು ಮುಂದೆ ಬಂದು ನೆರವೇರಿಸಿಕೊಡಬೇಕು. ಮಾನವತಾ ಮದುವೆಗಳು ಯಾವ ಆತಂಕಗಳೂ ಇಲ್ಲದೆ ನೆರವೇರುವಂಥ ವಾತಾವರಣ ಉಂಟುಮಾಡಬೇಕು.

ಈ ದಿಕ್ಕಲ್ಲಿ ಕೆಲಸಮಾಡಲು 'ಮಾನವತಾ ಮದುವೆವೇದಿಕೆ' ರೂಪು ಪಡೆದಿದೆ. ಇದು ಅಂತರ್‌ಮತೀಯ ಅಂತರ್ ಜಾತೀಯ, ಸರಳ ಮದುವೆಗಳನ್ನು ವ್ಯವಸ್ಥೆ ಮಾಡುವುದು ಇಂಥ ಮದುವೆಗಳಲ್ಲಿ ಏಳುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಕರಿಸುವುದು. ಇಂಥ ಮದುವೆ ಆಗಬಯಸುವವರಿಗೆ ವರ ವಧು ಅನ್ವೇಷಣೆಯಲ್ಲೂ ಈ ವೇದಿಕೆ ಕೆಲಸಮಾಡುವುದು.

ಇದಕ್ಕಾಗಿ 'ಮಾನವತಾ ವರ-ವಧು' ವಿಭಾಗವನ್ನು ಆಂದೋಲನ ಮತ್ತು ಪಂಚಮ ಪತ್ರಿಕೆಗಳಲ್ಲಿ ಇನ್ನು ಮುಂದೆ ಆರಂಭಿಸುವೆವು. ಈ 'ಮಾನವತಾ ವರ-ವಧು' ವಿಭಾಗದಲ್ಲಿ ಅಪೇಕ್ಷಿಸುವವರು ತಮ್ಮ ಪರಿಚಯ ಕೊಟ್ಟು ತಮಗೆ ತಕ್ಕಂಥ ಗುಣಗಳ ವರ ಅಥವಾ ವಧುವನ್ನು ಕೇಳಬಹುದು. ಮತ್ತು ಈಗಾಗಲೇ ಇಂಥ ವಿವಾಹ ಆಗಿರುವವರು ತಮ್ಮ ಪರಿಚಯವನ್ನು ಪ್ರಕಟಣೆಗೆ ಕೊಡಬಹುದು. ಸೂಕ್ತವಾಗಿ ಕ್ರಮೇಣವಾಗಿ ಇವನ್ನು ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ :
ವ್ಯವಸ್ಥಾಪಕ
'ಮಾನವತಾ ಮದುವೆ ವೇದಿಕೆ'
2649 | 2 ಕೆ.ಜಿ. ಕೊಪ್ಪಲು, ಮೈಸೂರು

ಒಂದು ವಿವರಣೆ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಆರ್ಥಿಕ ಕಾರ್ಯಕ್ರಮಗಳು ಮತ್ತು ಬಡವರು' ಲೇಖನದ ಬಗ್ಗೆ ಹನಗವಾಡಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಕೆಲವು ಕಿಡಿಗೇಡಿಗಳು ಅಪಪ್ರಚಾರ ಮಾಡಿದ್ದಾರೆ. ಅದಕ್ಕೋಸ್ಕರ ಇಲ್ಲಿ ವಿವರಣೆ ನೀಡ ಬಯಸುತ್ತೇನೆ.

ಇಡೀ ಇಂಡಿಯಾ ದೇಶದಲ್ಲಿ ತುರ್ತು ಪರಿಸ್ಥಿತಿಯು ಬರುವ ಮುನ್ನ ನಮ್ಮ ಹಳ್ಳಿಗಳಲ್ಲಿ ಇದ್ದ ದ್ವೇಷಾಸೂಯೆಗಳ ಹಿನ್ನೆಲೆಯಲ್ಲಿ ೨೦ ಅಂಶದ ಕಾರ್ಯಕ್ರಮವನ್ನು ವಿಶ್ಲೇಷಿಸಲಾಗಿದೆ. ಮನೆ ಕಟ್ಟಲು ಕೊಡುವ 1250 ರೂ ಗಳು ಹೇಗೆ ತೀರಾ ಬಡವನೊಬ್ಬನಿಗೆ ಮನೆ ಕಟ್ಟಿಕೊಳ್ಳಲಾಗದ ನಿಸ್ಸಹಾಯಕತೆಯನ್ನು ಲೇಖನ ಅರ್ಥೈಸುತ್ತದೆ, ರಾಜಕೀಯವಾಗಿ ಹಲವು ಗುಂಪುಗಳಾದ ಹಳ್ಳಿಗಳಲ್ಲಿ ಹೇಗೆ ಪಕ್ಷಪಾತ ನಡೆಯುತ್ತದೆ ಎಂಬುದನ್ನೂ ಕೂಡ.

ಆದರೆ ಹನಗವಾಡಿಯಲ್ಲಿ ಇಂಥ ಗುಂಪುಗಳಾಗಲೀ ದ್ವೇಷಾಸೂಯೆಗಳು ಇಲ್ಲದಿರುವುದರಿಂದ ೨೦ ಅಂಶದ ಕಾರ್ಯಕ್ರಮ ಯಶಸ್ವಿಯೇ ಎಂದೇ ಹೇಳಬೇಕು. ಮತ್ತು ಇಲ್ಲಿಯ ಛೇರ್ಮನ್‌ರು ಸುಮಾರು ೬೬ ವರ್ಷಗಳಿಗೂ ಮೀರಿದವರಾದರೂ ತರುಣರಂತೆ ಎಲ್ಲರೊಡನೆ ಬೆರೆತು ಕೆಲಸ ಮಾಡುತ್ತಿದ್ದಾರೆ.

ವಾಸ್ತವಾಂಶ ಹೀಗಿರುವಾಗ ಇಡೀ ಲೇಖನ ಹನಗವಾಡಿಯನ್ನೇ ಕುರಿತದ್ದು ಎಂದು ಹೇಳುವ ಕಿಡಿಗೇಡಿಗಳ ಅಪಪ್ರಚಾರಕ್ಕೆ ಪ್ರಜ್ಞಾವಂತರೂ ಮತ್ತು ಯುವಕರು ಒಟ್ಟಿಗೆ ಧಿಕ್ಕರಿಸ ಬೇಕಾಗಿದೆ.

–ರುದ್ರಪ್ಪ ಹನಗವಾಡಿ

....

ಪ್ರತಿಕ್ರಿಯೆ

ದೌರ್ಜನ್ಯಕ್ಕೆ ಅಜ್ಞಾನ ಕಾರಣವಲ್ಲ

ಪಂಚಮದಲ್ಲಿ 'ಅಖಂಡ ಭಾರತ ಮತ್ತು ಹಿಂದುಳಿದ ವರ್ಗಗಳು' ಎಂಬ ಲೇಖನದಲ್ಲಿ, ಪ್ರಕಟವಾದ ಬಗ್ಗೆ ಕೆಲವು ಮಾತುಗಳನ್ನು ಹೇಳ ಬಯಸುತ್ತೇವೆ. ಎಂ. ಡಿ. ಎನ್ ರವರು 'ಹಳ್ಳಿಗಳಲ್ಲಿ ಅವರ್ಣೀಯರು ಮತ್ತು ಸವರ್ಣೀಯರ ನಡುವೆ ನಡೆಯುತ್ತಿರುವ ಕಲಹಗಳಿಗೆ ಅಜ್ಞಾನವೇ ಕಾರಣ' ಎಂದು ಬರೆದಿದ್ದಾರೆ. ಇದು ಅಜ್ಞಾನವಲ್ಲ. ಜಮೀನ್ದಾರಿ ವರ್ಗಗಳು ದಲಿತರನ್ನು ತುಳಿದಿಡುವ ಪ್ರಯತ್ನಗಳ ವಿರುದ್ಧ ಏನಾದರೂ ವಿರೋಧ ಬಂದಾಗ ಜಮೀನ್ದಾರರು ತೀವ್ರವಾಗಿ ದೌರ್ಜನ್ಯವನ್ನು ನಡೆಸುತ್ತಿದ್ದಾರೆ, ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಈ ದೇಶದ ತುದಿಯಲ್ಲಿ ಕುಳಿತು ಆಳುವವರ್ಗ ಮತ್ತು ಅವರ ಊರುಗೋಲಾದ ಜಮೀನ್ದಾರಿ ವರ್ಗಗಳು ಈ ದೌರ್ಜನ್ಯದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೆಂಬಲಿಸುತ್ತಲೇ ಇವೆ. ಈ ಕಲಹಗಳಿಂದಾಗಿ ಎಲ್ಲ ದಲಿತರ ತೀವ್ರವಾದ ಸಂಘಟಿತ ಪ್ರತಿಭಟನೆ ಪ್ರಾರಂಭವಾಗಿ ತಮ್ಮ ಬುಡಕ್ಕೇ ಕೊಡಲಿ ಪೆಟ್ಟು ಬಿದ್ದೀತೆಂದು ಈ ವರ್ಗಗಳು ಎಂಜಲನ್ನು ಎಸೆಯುತ್ತಿವೆ.

ಲೇಖಕರು ಹೇಳುವಂತೆ ಅಖಂಡ ಭಾರತ ಜಾತಿಯವರ ವಿರುದ್ಧ ಹೋರಾಟ ನಡೆಸಲು ದಲಿತರು ಮತ್ತು ಇತರ ಸವರ್ಣೀಯವರು ಒಟ್ಟಾಗ ಬೇಕೆಂದು ಕೇವಲ ಈ ದೇಶದ ಅಧಿಕಾರಶಾಹಿ ತೂರಿಸಿಕೊಳ್ಳುವ 'ಎಲೈಟ್' ಹರಿಜನರಿಗೆ ಮಾತ್ರ ಆಕರ್ಷಕವಾಗುತ್ತದೆ. ಇಂದಿನ ಬಹುಪಾಲು ಭೂರಹಿತ ದಲಿತರಿಗೆ ಇದು ಒಂದು ಪ್ರತಿಕ್ರಿಯಾವಾದಿ ಆರ್ಗ್ಯುಮೆಂಟ್ ಆಗುತ್ತದಷ್ಟೆ. ಹಳ್ಳಿಗಳಿಂದ ಬಂದ ವಿದ್ಯಾವಂತ ಮತ್ತು ನಿರುದ್ಯೋಗಿ ಜನತೆಗೆ ಅವಕಾಶ ಸಿಗುತ್ತಿಲ್ಲವೆಂದು ರೋಧಿಸಿದ್ದಾರೆ. ಈ ದೇಶದಲ್ಲಿ ಇನ್ನೂ ಉಳಿಗಮಾನ್ಯ ಪದ್ಧತಿ ಗಟ್ಟಿಯಾಗಿಯೇ ಇದೆ. ಇಲ್ಲಿ ದೇಶೀಯ ಬಂಡವಾಳಶಾಹಿ ಅಥವಾ ಸಾರ್ವಜನಿಕ ಕ್ಷೇತ್ರಗಳು ಇವರನ್ನು ಹೀರಿಕೊಳ್ಳಲು ಅಸಮರ್ಥವಾಗಿವೆ. ಇದಕ್ಕೆ ಕಾರಣ ದೇಶೀಯ ಬಂಡವಾಳಕ್ಕೆ ಮಾತ್ರವೇ ಭವಿಷ್ಯ ಇಲ್ಲದಿರುವುದು. ನಂಜುಂಡಸ್ವಾಮಿಯವರು ಕೇವಲ ಅಖಂಡ ಭಾರತ ಜಾತೀಯರ ಬಗ್ಗೆ ಕೆಂಡ ಕಾರಿದ್ದಾರೆ. ಜತೆಗೆ ಈ ದೇಶದಲ್ಲಿ ದಲಿತರ ಮೇಲೆ ದಿನವೂ ದೌರ್ಜನ್ಯ ನಡೆಸುತ್ತಿರುವವರೊಡನೆ. ಸಂಯುಕ್ತ ರಂಗವನ್ನು ರಚಿಸಿ ಎಂದು ಹೇಳುವ ಲೇಖಕರ ಜಮೀನ್ದಾರರ ಏಜೆಂಟರೇ (ಜಾತಿ ವಿರೋಧಿ ಹೆಸರಿನಲ್ಲಿ) ಎಂಬ ಸಂಶಯ ಬರುತ್ತನೆ. ಈ ಲೇಖನವನ್ನು ಪ್ರಕಟಿಸಿ 'ಪಂಚಮ' ತನ್ನ ಪ್ರಾಮಾಣಿಕತೆಯನ್ನು ಮಾರಿಕೊಳ್ಳುತ್ತಿದೆ ಎನಿಸುತ್ತದೆ.

-ವಿ. ಲಕ್ಷ್ಮೀನಾರಾಯಣ

ಕುಕ್ಕರಹಳ್ಳಿ, ಮೈಸೂರು-9

....

ಅಸಮರ್ಥ ಹೇಳಿಕೆ

5.7.76ರ ಪಂಚಮದಲ್ಲಿ ನಂಜುಂಡಸ್ವಾಮಿಯವರು ಹಿಂದುಳಿದ ವರ್ಗಗಳ ಬಗ್ಗೆ ಬರೆಯುತ್ತ ಮೂರ್ಖ ಹೇಳಿಕೆಯನ್ನು ನೀಡಿದ್ದಾರೆ. 'ಹಳ್ಳಿಗಳಲ್ಲಿ ಸವರ್ಣೀಯರಿಗೂ ಅವರ್ಣೀಯರಿಗೂ ನಡೆಯುತ್ತಿರುವ ಹೋರಾಟಕ್ಕೆ ಅಜ್ಞಾನವೇ ಕಾರಣ' ಎಂಬ ಪೆದ್ದ ಹೇಳಿಕೆ ನೀಡಿ ಇದಕ್ಕೆ ಕೃಷಿಯೇತರ ಜನಾಂಗ ಕಾರಣ ಅಂತ ಜಾರಿಕೊಂಡಿರುವುದು ನಾಚಿಕೆಗೇಡಿನ ಸಂಗತಿ. ಅವರ ಈ ಹೇಳಿಕೆಯನ್ನು ಗಮನಿಸಿದಾಗ ಅವರೆಷ್ಟು ಜಾತಿವಾದಿಗಳು ಎಂಬುದು ಅರಿವಾಗುತ್ತದೆ.

ಇಂದು ಭಾರತದ ಯಾವುದೇ ಹಳ್ಳಿಯಲ್ಲಿ ನೋಡಿದರೂ ದಲಿತರಿಗೆ ಹೆಚ್ಚಾಗಿ ಹಿಂಸೆ, ಆಗುತ್ತಿರುವುದು ಜಮೀನ್ದಾರಿ ಬಂಡವಾಳಶಾಹಿಗಳಿಂದಲೇ. ಈ ಜಮೀನ್ದಾರಿ ಬಂಡವಾಳಶಾಹಿಗಳು ಸಾಮಾನ್ಯವಾಗಿ, ಕರ್ನಾಟಕದಲ್ಲಿ-ಗೌಡ ಲಿಂಗಾಯತ್ತರು, ತಮಿಳು ನಾಡಿನಲ್ಲಿ – ಚಿಟ್ಟಿಯಾರುಗಳು, ಆಂಧ್ರದಲ್ಲಿ-ರೆಡ್ಡಿಗಳು, ಇತ್ಯಾದಿ. ಇದು ನಂಜುಂಡಸ್ವಾಮಿಯವರಿಗೇಕೆ ಕಾಣಿಸದೇ ಹೋಯಿತೋ ಗೊತ್ತಾಗುವುದಿಲ್ಲ. ಅವರಿಗೇ ಗೊತ್ತಿರುವಂತೆ ಒಬ್ಬ ಗೌಡ ಒಬ್ಬ ಹೊಲೆಯನನ್ನು ಮನೆಯ ಹೊರಗಟ್ಟಿರುವುದು ಅಜ್ಞಾನವೇ? ತಾನು ಧಿಮಾಕು ಮಾಡುತ್ತಾ ದಲಿತನಿಂದ ಹೇಯ ಕೆಲಸಗಳನ್ನು ಮಾಡಿಸಿ ಕೊಳ್ಳುವುದು ಅಜ್ಞಾನವೇ? ತಾನು ಹೇತ ಹೇಲನ್ನು ದಲಿತನಿಂದ ಬಾಚಿಸಿಕೊಳ್ಳುವುದು ಅಜ್ಞಾನವೇ? ನಂಜುಂಡಸ್ವಾಮಿಯವರು ಯೋಚಿಸಬೇಕು. ಇದಕ್ಕೆ ಕೃಷಿಯೇತರ ಜನಾಂಗವಷ್ಟೇ ಕಾರಣ ಅಲ್ಲ. ಕೃಷಿಕರಲ್ಲದ ಜಮೀನ್ದಾರಿ ಬಂಡವಾಳಶಾಹಿಗಳಾದ ಸವರ್ಣೀಯರೂ ಕಾರಣ. ಅವರು ಮಾಡುವುದು ಅಜ್ಞಾನವಲ್ಲ. ಬುದ್ಧಿವಂತತನ.

ಇನ್ನು ಮುಂದಾದರೂ ಶ್ರೀಯುತರು ಇಂಥ ಬಾಲಿಷ ಹೇಳಿಕೆಗಳನ್ನು ನಿಲ್ಲಿಸಲಿ. ಇಂಥ ಹೇಳಿಕೆಗೆ ಅವಕಾಶ ನೀಡಿ 'ಪಂಚಮ' ತನ್ನನ್ನ ತಾವೇ ವಂಚಿಸಿಕೊಂಡಂತಾಗಿದೆ.

–ಎಂ. ವಿಜಯಲಕ್ಷ್ಮಿ

ಸರಸ್ವತಿಪುರಂ, ಮೈಸೂರು-9

ನ್ಯಾರೊ ಮೈಂಡ್ ಯಾರದಲ್ಲ?

'ಉತ್ತಮ ಸಂಚಿಕೆ' ತಲೆಬರಹದಡಿಯಲ್ಲಿ ಪ್ರಕಟವಾಗಿರುವ ಆರ್. ನಿರ್ಮಲಾ ಅವರ ಪ್ರತಿಕ್ರಿಯೆಗೆ (ಪಂಚಮ, 5-7-76) ಅನಿವಾರ್ಯವಾಗಿ ಪ್ರತಿಕ್ರಿಯೆ ಬರೆಯಬೇಕಾಯ್ತು. ಯಾಕೆಂದರೆ, ನಿರ್ಮಲಾರವರು "ಕಮ್ಯುನಿಷ್ಟರ ನ್ಯಾರೋಮೈಂಡ್ ಬುದ್ಧಿಗೆ..." ಅಂತ ಏನೋ ಬರೆದಿದ್ದಾರೆ. ನಿರ್ಮಲಾರವರು ಹಾಗೆ ಬರೆಯಬೇಕಾದರೆ ಅವರು ಕಮ್ಯುನಿಷ್ಟರ ವಿರೋಧಿಗಳಿರಬೇಕೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ನನ್ನ ಪ್ರಶ್ನೆ, ಕಮ್ಯುನಿಷ್ಟರದು ನ್ಯಾರೋ ಮೈಂಡ್ ಆದರೆ ಉಳಿದವರದು ಏನು? ಉಳಿದ ಎಡಪಂಥೀಯದು ಅದಕ್ಕಿಂತಲೂ ನ್ಯಾರೋ ಎಂಬುದನ್ನು ಅವರು ಮರೆತಂತಿದೆ.

ಹಿಂಗೆ ನೋಡಿದಾಗ ಎಲ್ಲಾ 'ಇಸಂ' ಗಳದ್ದೂ ನ್ಯಾರೋ ಮೈಂಡೆದ್ದೇ. ಇದರೊಟ್ಟಿಗೇ ನಾನು ತಿಳಿಯಬಿಚ್ಛಿಸುವುದು: ದಲಿತರಿಗೆ ಬೇಕಾದ್ದು ಈ ಯಾವ 'ಇಸಂ'ಗಳೂ ಅಲ್ಲ. ಅವರಿಗೆ ಅವರ ಬದುಕಿಗೆ ಸಂಬಧಿಸಿದಂತ ಜಾತೀಯ ಮತ್ತು ವರ್ಗೀಯ ಹೋರಾಟಬೇಕು. ಅದನ್ನು ಅವರು ಸಾಧಿಸಲು ಅವರದೇ ಆದ ಸಿದ್ಧಾಂತ ಬೇಕು. ಈ ದೃಷ್ಟಿಯಲ್ಲಿ ಅಂಬೇಡ್ಕರರ ಸಿದ್ಧಾಂತವೇ ಹೆಚ್ಚು ಯೋಗ್ಯವಾದದು. ಈ ದಿಕ್ಕಿನಲ್ಲಿ ದಲಿತರನ್ನು ವಿಚಾರವಂತರನ್ನಾಗಿಸುವಲ್ಲಿ 'ಪಂಚಮ, ಪ್ರಯತ್ನಿಸುತ್ತದೆ ಎಂದು ನಂಬಿರುತ್ತೇನೆ.

–ಹೆಚ್. ಜಿ. ಏಕಾಶಿಗೌಡ

ಹೊನ್ನಾಪುರ, ಪಿರಿಯಾಪಟ್ಟಣ ತಾಲ್ಲೂಕು.

....

ದಾರಿದೀಪವಾಗಬೇಕು

ಇದುವರೆಗಿನ ಎಲ್ಲಾ 'ಪಂಚಮ'ಗಳನ್ನು ಓದಿದ್ದೇನೆ. ಎಲ್ಲರೂ ಪತ್ರಿಕೆ ಓದಿ ಖುಷಿ ಪಟ್ಟರೆ 'ಪಂಚಮ' ಓದಿ ನಾನು ವ್ಯಥೆ ಪಟ್ಟಿದ್ದೇನೆ. ಸವರ್ಣೀಯರ ಕೊಲೆಗಡುಕತನವನ್ನು ನೆನೆಸಿಕೊಂಡರೆ ಈಗಲೂ ಮೈ ಜುಂ ಅನ್ನುತ್ತದೆ. ಮಾನವ ಮಾನವರ ನಡುವೆಯೂ ಎಂಥ ಅಮಾನುಷ ಕೃತ್ಯಗಳು ಜರುಗುತ್ತಿವೆ ಎಂಬುದು ನಿಮ್ಮ ಪತ್ರಿಕೆ ಓದಿದ ಎಲ್ಲರಿಗೂ ಅರಿವಾಗುತ್ತದೆ.

ಬರೀ ಹಿಂದೂ ಸವರ್ಣೀಯರಿಂದಲೇ ಆಗುತ್ತಿದ್ದ ಕಿರುಕುಳ ಈಗ ಮುಸ್ಲಿಮರಿಂದಲೂ ಆಗುತ್ತಿರುವುದು ಈ ಸಮಾಜದ ಪತನದ ಸಂಕೇತವಾಗಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಎಲ್ಲಾ ರಂಗಗಳಲ್ಲೂ ದಲಿತರಿಗೂ ಮುಸ್ಲಿಮರಿಗೂ ಯಾವ ವ್ಯತ್ಯಾಸವೂ ಇಲ್ಲ. ಇದನ್ನು ಕಾಣದ ಮುಸ್ಲಿಮರು ತಮ್ಮನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ.

ಸಾಹಿತಿ ಜಿ. ವೆಂಕಟಯ್ಯನವರ ಪರಿಚಯ ಚೆನ್ನಾಗಿದೆ. ಆದರೆ ಅವರು ದಲಿತರ ಪ್ರತೀಕವಂತೆ ಅಲ್ಲ. ಯಾಕಂದರೆ ಅವರ ಯಾವ ಕೆಲಸ ಕಾರ್ಯಗಳಾಗಲಿ ಕೃತಿಗಳಾಗಲಿ ದಲಿತರ ಕುರಿತವಾಗೇ ಇಲ್ಲ. ನರಸಿಂಹಮೂರ್ತಿ ಮತ್ತು ರುದ್ರಪ್ಪ ಹನಗವಾಡಿ ಅವರ ಲೇಖನಗಳು ಚೆನ್ನಾಗಿವೆ. ಕವನಗಳಲ್ಲಿ 'ಸುಲಿಗೆ'ಗಿಂದ 'ಗೊಂಬೆಗಳು' ಹಿಡಿಸಿತು. ಹೊಸದಾಗಿ ಪ್ರಾರಂಭಿಸಿರುವ 'ಪುಸ್ತಕ ವಿಮರ್ಶೆ' ಒಳ್ಳೆಯ ಕೆಲಸ. ಮಾನೂಲಿ 'ಕಿಡಿಗೇಡಿ' ಮಾಯವಾಗಿ ಅಲ್ಲಿ ಬೇರೊಂದು ಅಸಮಂಜಸ ಲೇಖನ ಕಾಣಿಸಿಕೊಂಡದ್ದು ಆಶ್ಚರ್ಯಕರ.

ಒಟ್ಟಿನಲ್ಲಿ 'ಪಂಚಮ' ಒಳ್ಳೆಯ ಕ್ರಿಯಾತ್ಮಕ ಕೊಡುಗೆ. ಆದರೆ 'ಪಂಚಮ' ಇದ್ದುದನ್ನು ವರದಿ ಮಾಡುವುದಷ್ಟೆ ಮಾಡದೆ ದಲಿತರಲ್ಲಿ ವಿಚಾರ ಪ್ರಜ್ಞೆ ಮೂಡಲು ಪ್ರಚೋದಿಸುವಂತ ಲೇಖನಗಳನ್ನು ಪ್ರಕಟಿಸಿ ಅವರಿಗೆ ದಾರಿದೀಪವಾಗಬೇಕೆಂಬುದು ನಮ್ಮ ಆಸೆ.

-ಎಂ. ಎಸ್. ಸಮೀಯುಲ್ಲಾ

–ಎಚ್. ಅಬ್ದುಲ್ ಅಜೀಜ್

ಹೆಬ್ಬಾಲೆ, ಸೋಮವಾರಪೇಟೆ ತಾಲ್ಲೂಕು

....

(ಮೊದಲ ಪುಟದಿಂದ)

4, ರೈಸ್‌ಮಿಲ್ ಡ್ರೈವರ್‌ಗಳು 3, ಲಾರಿ ಮತ್ತು ಜೀಪ್ ಡ್ರೈವರ್‌ಗಳು 4, ಲಾರಿ ಕ್ಲೀನರ್‌ಗಳು 4, ಒಟ್ಟು 45.

ಈ 45 ಸಂಖ್ಯೆ ನೌಕರರಲ್ಲಿ ಹರಿಜನ ಗಿರಿಜನರೂ ಒಬ್ಬರೂ ಇಲ್ಲದೆ ಬಹಳ ವರ್ಷಗಳಿಂದ ನಡೆದು ಬರುತ್ತಿದೆ. ಸಂವಿಧಾನಾತ್ಮಕವಾಗಿ ಹರಿಜನ ಗಿರಿಜನರಿಗೆ ದೊರೆಯಬೇಕಾಗಿರುವ ಉದ್ಯೋಗ ಅವಕಾಶಗಳನ್ನು ಕಲ್ಪಿಸುವಲ್ಲಿ ತಿರಸ್ಕಾರ ಮನೋಭಾವ ಮತ್ತು ಕೆಲವೇ ಬಂಡವಾಳಷಾಹಿ ಹಾಗೂ ಮೂರನೇ ದರ್ಜೆ ರಾಜಕಾರಣಿಗಳ ಬಿಗಿಮುಷ್ಠಿಯಲ್ಲಿರುವ ಇಂತಹ ಸಹಕಾರ ಸಂಸ್ಥೆಗಳ ಕಡೆ ಸರ್ಕಾರ ಕೂಡಲೆ ಗಮನಿಸಬೇಕಾಗಿದೆ.

'ದೇವದಾಸಿ' : ಜೀವಂತ ಅಮಾನುಷ ಪದ್ಧತಿ

ವಿಶೇಷ ಲೇಖನ

ಇಂಡಿಯಾ ದೇಶದಲ್ಲಿ ಎಷ್ಟು ಜನಗಳಿದ್ದಾರೋ ಅಷ್ಟೇ ಅಮಾನುಷ ಪದ್ಧತಿಗಳಿವೆ ಎಂದರೆ ಅತಿಶಯೋಕ್ತಿಯಾಗಲಾರದು. ವೈಜ್ಞಾನಿಕ ಯುಗವೆನಿಸಿದ ಇಂದಿನ ದಿನಗಳಲ್ಲೂ ಮೂಢನಂಬಿಕೆಗಳು ಜನ್ನನ್ನು ಹಿಂಡುತ್ತಿವೆ. ಅವರನ್ನು ಕತ್ತಲ ಕೂಪದಲ್ಲಿ ಇರಿಸಿ ಅವರ ಕಣ್ಣಿಗೆ ಮಣ್ಣೆರಚುವ ಕೆಲಸವನ್ನು ಇವು ಮಾಡುತ್ತಿವೆ. ವ್ಯಕ್ತಿಯೊಬ್ಬನ ಮಾನವೀಯ ಗುಣವನ್ನೇ ಕಬಳಿಸಿ ಅವನನ್ನು ಪಶುವಿನಂತೆ ವರ್ತಿಸಲೂ ಈ ಮೂಢನಂಬಿಕೆಗಳೇ ದಾರಿಮಾಡಿಕೊಡುತ್ತವೆ ಎಂಬುದನ್ನು ಮರೆಯಲಾಗದು. ಅದರೊಟ್ಟಿಗೆ ಈ ಎಲ್ಲದರ ಹಿಂದೆ ಬಂಡವಾಳಶಾಹಿ ಸವರ್ಣೀಯ ಜನರ ಕೈವಾಡ ಇರುವುದನ್ನು ಯಾರೂ ಗುರುತಿಸ ಬಹುದಾಗಿದೆ.

ಹೇಯ ಪದ್ಧತಿ.

ಸಮಾಜದ ಎಲ್ಲಾ ಸ್ಥಾನಗಳಿಂದಲೂ ವಂಚಿತರಾದ ದಲಿತರಲ್ಲಿ ಈ ಮೂಢನಂಬಿಕೆಗಳ ಪಾತ್ರ ಹಿರಿದು. ಅವರ ಬದುಕಿಗೆ ಅವರುಣ್ಣುವ ಕೂಳಿನಂತೆಯೇ ದಿನವೂ ಅಂಟಿರುವ ಈ ಹೇಯ ಮೂಢ ನಂಬಿಕೆಗಳು ಅವರನ್ನು ಕ್ರೂರವಾಗಿ ಹಿಂಸಿಸುತ್ತಿವೆ. ತಮಗರಿವಿಲ್ಲದಂತೆಯೇ ದಲಿತರು ಇಂಥ ಮೂಢ ನಂಬಿಕೆಗೆ ಬಲಿಯಾಗಿ ತಮ್ಮ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಶತ ಶತಮಾನಗಳು ಬರೀ ಕೆಸರ ಹುಳುಗಳಾಗಿ ಒದ್ದಾಡಿದ ದಲಿತರ ನಿಜ ಬದುಕಿನತ್ತ ಒಮ್ಮೆ ಕಣ್ಣು ಹಾಯಿಸಿದರೂ ಅವರು ಘೋರ ಕೊಳೆಗಡುಕತನದಿಂದಲೂ ಭಯಂಕರ ಅಸಹಾಯಕತೆಯಿಂದಲೂ ನರಳುತ್ತಿರುವುದನ್ನು ಕಾಣಬಹುದಾಗಿದೆ. ಹೀಗೆ ಅವರನ್ನು ಜೀವಂತವಾಗಿ ಕೊಲ್ಲುವ ಅಮಾನುಷ ಹೇಯ ಮೂಢ ನಂಬಿಕೆಗಳಲ್ಲಿ 'ದೇವದಾಸಿ' ಪದ್ಧತಿಯೂ ಒಂದು.

ಸಾಮಾನ್ಯವಾಗಿ ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿನ ಹೊಲೆ ಮಾದಿಗರ ಬದುಕು ಈ ಪದ್ಧತಿಗೆ ಬಲಿಯಾಗಿದೆ. ತಮ್ಮ ತಾತ ಮುತ್ತಾತಂದಿರ ಕಾಲದಿಂದ ನಡೆದುಕೊಂಡುಬಂದ ಈ ನೀಚ ಪದ್ಧತಿ ಇಂದೂ ಜೀವಂತವಾಗಿದೆ. ಜೀವನದ ಬಗ್ಗೆ, ಸಮಾಜದ ಬಗ್ಗೆ, ಯಾವುದರ ಬಗ್ಗೆಯೂ, ಏನೂ ತಿಳಿಯದಿದ್ದಂತಹ ಮುಗ್ಧ ಹೆಣ್ಣುಮಕ್ಕಳಿಗೆ ಎಳೆವಯಸ್ಸಿನಲ್ಲೆ ದೇವದಾಸಿ ಪಟ್ಟಕಟ್ಟಿ ಅವರನ್ನು ಪ್ರತ್ಯಕ್ಷವಾಗಿ ಸೂಳೆಗಾರಿಕೆಗೆ ನೂಕುವ ಅನಿಷ್ಟ ಪದ್ಧತಿ ಇದು.

ಹರಕೆಗೆ ಬಲಿ

ಅವ್ವ ಅಪ್ಪಂದಿರ ಅನೇಕ ಆಸೆಗಳಿಗೆ ಬಲಿಯಾಗಿ ಅವರ ಮಕ್ಕಳು ಬದುಕ ತೇಯ ಬೇಕಾಗುತ್ತದೆ. ಬಡತನ, ರೋಗ ರುಜಿನಗಳು ಇದಕ್ಕೆ ಮುಖ್ಯ ಕಾರಣವಾಗುತ್ತದೆ. ಬಡತನದಲ್ಲಿ ನರಳುತ್ತಿರುವ, ಅನೇಕ ಕುಟುಂಬಗಳಲ್ಲಿ ಇದು ಕಂಡು ಬರುತ್ತದೆ. ತಮ್ಮ ಬಡತನ ಹೋದರೆ, ಸ್ಥಿತಿ ಸುಧಾರಿಸಿದರೆ ತಮ್ಮ ಮಗಳನ್ನು 'ದೇವದಾಸಿ' ಯಾಗಿಬಿಡುವುದಾಗಿ ಅವರ ಮನೆದೇವರಲ್ಲಿ ಹರಕೆಮಾಡಿಕೊಳ್ಳುತ್ತಾರೆ. ಮಾಡಿಕೊಂಡ ಹರಕೆಗೆ ಪ್ರತಿಯಾಗಿ ತಮ್ಮ ಮುದ್ದು ಮಕ್ಕಳನ್ನು ಸೂಳೆಗಾರಿಕೆಗೆ ದೂಡುತಾರೆ. ಮಕ್ಕಳು ಚಿಕ್ಕವರಿರುವಾಗಲೇ ಅವರನ್ನು ದೇವರ ಗುಡಿಗೆ ತಮ್ಮ ಬಂಧುಗಳ ಮತ್ತು ನೆರೆಹೊರೆಯವರೊಂದಿಗೆ ಕರೆದುಕೊಂಡು ಹೋಗಿ ಹೊಸ ಬಟ್ಟೆ ತೊಡಿಸಿ, ಹೊಸ ಬಳೆ ತೊಡಿಸಿ ಅರಿಶಿನ, ಕುಂಕುಮ, ಅಕ್ಕಿ ಬೆಲ್ಲ ಇಟ್ಟು ದೇವರಿಗೆ ಒಪ್ಪಿಸುತ್ತಾರೆ. ಅದರಂತೆ ಆಕೆ ವಯಸ್ಸಿಗೆ ಬಂದ ಮೇಲೆ ಸಮಾಜದ ಯಾವ ನಿರ್ಬಂಧವೂ ಇಲ್ಲದೆ ಸೂಳೆಗಾರಿಕೆ ನಡೆಸ ಬಹುದಾಗುತ್ತದೆ. ಇದು ಸೂಳೆಗಾರಿಕೆಗೆ ಒಂದು ಪರ್ಮಿಟ್ ಇದ್ದಂತೆ.

'ದೇವದಾಸಿ' ಪಟ್ಟಕ್ಕೆ ಬಲಿಯಾದ ಹುಡುಗಿ ವಯಸ್ಸಿಗೆ ಬರುವುದನ್ನೆ ಆ ಊರಿನ ಯಜಮಾನನೋ ಪಟೇಲನೋ ಅಥವಾ ಯಾವನೋ ದೊಡ್ಡ ಕುಳ ಕಾಯ್ದಿರುತ್ತಾನೆ. ಅವಳ ಬದುಕನ್ನು ದೋಚುತ್ತಾನೆ. ಅವಳಿಗೆ ಅಷ್ಟೊ ಇಷ್ಟೊ ಕಾಸು ಕೊಟ್ಟು ತನ್ನ ತೀಟೆ ತೀರಿಸಿಕೊಳ್ಳುತ್ತಿರುತ್ತಾನೆ. ಅವನು ಕೊಡುವಷ್ಟರಲ್ಲೇ ಹೊಟ್ಟೆ ತುಂಬದೆ ನಾಲ್ಕು ಕಾಸು ಎಸೆದವರಿಗೂ ಮೈಚಾಚದ ದೇವದಾಸಿಯರಿಲ್ಲ.

ಇದರ ಹಿಂದಿರುವ ಬಂಡವಾಳಶಾಹಿ ಸವರ್ಣೀಯರ ಹಿಕಮತ್ತನ್ನು ಇಲ್ಲಿ ನೆನೆಯಬಹುದು. ಶೋಷಣೆಗೆ ಹೇಗೆ ಭದ್ರ ಕಟ್ಟಡವನ್ನು ಇವರು ಹಾಕಿರುವರು ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಹೊಲೆ ಮಾದಿಗರ ಹೆಂಗಸರ ರುಚಿ ನೋಡಲು ಬಂಡವಾಳ ಶಾಹಿ ಸವರ್ಣೀಯ ಲಫಂಗರು ಹೂಡಿರುವ ತಂತ್ರ ಇದು ಎನ್ನುವುದು ಎಂಥವನಿಗೂ ತಿಳಿಯುತ್ತದೆ. ಇಂಥದಕ್ಕೆ ಬಲಿಯಾಗಿ, ಸಾಯಲಾರದೆ ಬದುಕಲಾರದೆ ಜೀವಂತ ಶವವಾಗಿರುವ ದೇವದಾಸಿಯರನ್ನು ಕಂಡರೆ ಕರುಳು ಕಿವುಚುತ್ತದೆ. ಸತ್ತರೆ ಗುಟುಕು ನೀರ ಬಿಡುವವರಿಲ್ಲದೆ ತಮ್ಮ ಮುಂದಿರುವ ಘೋರ ದುರಂತವನ್ನು ನೆನೆದು ಕಣ್ಣೀರು ಹಾಕುವ ಇಂಥ ಮಂದಿಗೆ ಈಗ ಯಾರೂ ಗತಿಯಿಲ್ಲ. ಸರ್ಕಾರ ಅವರಿಗೆ ಸೌಕರ್ಯವನ್ನು ಒದಗಿಸಿಲ್ಲ. ಹೀನ ಹಿಂದೂಧರ್ಮದ ಈ ಹೇಯ ಪದ್ಧತಿಯ ವಿರುದ್ಧ ಸರ್ಕಾರ ಕ್ರಮಕೈಗೊಳ್ಳಬೇಕು. ಅಂತೆಯೇ ದಲಿತರೂ ಇಂಥ ಎಲ್ಲ ರೀತಿಯ ಮೂಢನಂಬಿಕೆಗಳ ಬಗ್ಗೆ ಪ್ರಜ್ಞೆ ಮೂಡಿಸಿಕೊಳ್ಳಬೇಕು. ಅಂಥವರನ್ನು ತೊರೆದು ಮಾನವರಾಗಿ ಬಾಳಲು ಕಲಿಯಬೇಕು.

–ಕುನ್ನಣ್ಣ ಕ. ಪ್ರಸಾದಿ

ಮಾತಾಡಿದರೆ ಬಡಿತ, ಬಹಿಷ್ಕಾರ : ಕಂಗಾಲಾಗಿರುವ ಹರಿಜನರು

ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ಅನೇಕ ಅವಿದ್ಯಾವಂತ ಹರಿಜನರನ್ನೊಳಗೊಂಡ ತಾಲೋಕು. ಈ ಹರಿಜನರು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ಅದರಲ್ಲಿ ತಮ್ಮ ಪಾತ್ರ ಏನು? ಎಂಬುದೇ ತಿಳಿಯದ ಮುಗ್ಧರು, ಹಿಂದಿನಿಂದ ಇಂದಿನವರೆಗೆ ಇವರು ಮಿಗಿಲಾಗಿ ಸವರ್ಣೀಯರು ತಿಳಿದಿರುವಂತೆ ಹರಿಜನರೆಂದರೆ, ಕರೆದಾಗ ಬಂದು ಕೂಲಿ ಜೀತಮಾಡುವವರು ದನಿಕರು ಸತ್ತರೆ ಹೊತ್ತು ಹೊರ ಬಿಸಾಡುವವರು ಸತ್ತವರ ಬದುಕಿದವರ, ದೆವ್ವ, ದೇವರುಗಳನ್ನು ಕುಣಿಸಲು ತಮಟೆ ಬಡಿಯುವವರು' ಹಬ್ಬ ಮದುವೆಗಳಲ್ಲಿ ಅವರಾಕುವ ಹೆಳಸಲು ಹಿಡಿ ಅನ್ನಕ್ಕೆ ಕುಕ್ಕೆ ಹಿಡಿದು ಸಾಲುಕೂರುವವರು...ಇತ್ಯಾದಿ ಇತ್ಯಾದಿ.

ಈ ಆಚಾರ (ಅನಾಚಾರ) ವನ್ನು ಯಾರಾದರೂ ಹರಿಜನರು ಖಂಡಿಸಿದರೆ ಅವರಿಗೆ ಬಡಿತ, ಬಹಿಷ್ಕಾರ ಹಿಂಗೆ. ಇದಕ್ಕೆ ಪ್ರತ್ಯಕ್ಷ ಪ್ರಮಾಣಬೇಂದರೆ, ಇದೇ ತಾಲ್ಲೂಕಿನ ಸಂತೆಬಾಚಿಹಳ್ಳಿಯ ಘಟನೆ. ಇಲ್ಲಿ ಸುಮಾರು 30 ಹರಿಜನರ ಕುಟುಂಬಗಳು, ಮುನ್ನೂರಕ್ಕೂ ಮಿಗಿಲಾಗಿ ಇತರೆ ಸವರ್ಣೀಯರ ಮನೆಗಳು ಇವೆ. ಇಲ್ಲಿ ಕಳೆದ ಎರಡು ತಿಂಗಳ ಹಿಂದೆ "ಬಸವ ಜಯಂತಿ" ಆಚರಿಸಲಾಯಿತು. ಇದಕ್ಕೆ ತಮಟೆ ಬಡಿಯಬೇಕೆಂದು ಹರಿಜನರನ್ನು ಬಲವಂತಪಡಿಸಲಾಯಿತು. ಆದರೆ ವಿಚಾರವಂತರಾದ ಕೆಲವು ಹರಿಜನ ಮುಖಂಡರು ಇದನ್ನು ನಿರಾಕರಿಸಿದರು.

ಇದಾದ ಮೂರನೆ ರಾತ್ರಿಯೇ ಗ್ರೂಪ್ ಪಂಚಾಯಿತಿ ಛೇರ್‌ಮನ್ ಹಾಗೂ ಸದಸ್ಯರು ಒಡಗೂಡಿ, ಇನ್ನುಂದೆ ಹರಿಜನರ್ಯಾರನ್ನೂ ಕೂಲಿ ಕೆಲಸಕ್ಕೆ ಕರೆಯನಾ ಬಾರದು, ಅವರಿಗೆ ಯಾವ ವಸ್ತುವನ್ನಾದರೂ ಮಾರಬಹುದು, ಆದರೆ ಹರಿಜನರಿಂದ ಹುಲ್ಲು ಸೌದೆ ಯಾವುದನ್ನೂ ಕೊಂಡುಕೊಳ್ಳಬಾರದು; ಹೋಟೆಲ್, ಕ್ಷೌರದ ಷಾಪು ಯಾವುದಕ್ಕೂ ಸೇರಿಸಬಾರದು; ಹೋಟೆಲ್ ತಿಂಡಿಯನ್ನು ಹೊರಕೂತು ತಿಂದರೂ ಅದಕ್ಕೆ ಇತರರಿಗಿಂತ ಐದು ಪೈಸೆ ಹೆಚ್ಚು ವಸೂಲು ಮಾಡುವುದು, ಹೀಗೆಲ್ಲ ಕಿರುಕುಳ ಕೊಡುತ್ತಿದ್ದಾರೆ. ಬಹುತೇಕ ಬಡವರನ್ನೇ ಒಳಗೊಂಡ ಈ ಊರಿನ ಹರಿಜನರಿಗೆ ವಿಪರೀತ ಗೋಳಾಗಿದೆ. ಇದೇ ಅಲ್ಲದೆ ಅಲ್ಲಿನ ಹರಿಜನ ಮುಖಂಡರನ್ನು ಕೊಲೆ ಮಾಡಿ ಅದೇ ಊರಿನ ಪಡ್ಲದಮ್ಮ ದೇವಸ್ಥಾನದ ಶಂಕು ಸ್ಥಾಪನೆಗೆ ಇಟ್ಟಿರುವ 50 ಸಾವಿರ ರೂ. ಖರ್ಚು ಮಾಡಿ ಕೇಸನ್ನು ಗೆಲ್ಲುವೆವೆಂಬ ಸವರ್ಣೀಯರ, ಕೂಗೂ ಅಲ್ಲಲ್ಲಿ ಕೇಳಿ ಬರುತ್ತಿದೆ.



ಕಣ್ಣೋಟ

ಮುಸ್ಲಿಮರೊಡನೆ ಪಿಸುಮಾತು

"ಲೋ ಹೊಲೆಮಾದಿಗ..."

"ಹೇ ಸಾಭೀ..."

ಇಂಥ ಮಾತುಗಳು ಇಂದಿನ ವಸ್ತುಸ್ಥಿತಿ ಒಳಗೆ ರಕ್ತದಂತೊ ಅಥವಾ ಚರ್ಮದಂತೊ ಅಂತು ಇವೆ. "ಲೋ ಹೊಲೆಮಾದಿಗ" ಅಂದಾಗ ಹೊಲೆಮಾದಿಗನು ಅವಮಾನಿತನಾಗಿ ಕುಗ್ಗುವನು. "ಹೇ ಸಾಭಿ:" ಅಂದಾಗ ಮುಸಲ್ಮಾನ ಅವಮಾನಿತನಾಗಿ ಕುಗ್ಗುವನು. ಇಂಥ ಈ ಮಾತುಗಳು ಈ ಇಬ್ಬರ ಮನಸ್ಸಿಗೂ ಮನಸ್ಸಿನ ತಳದ ಕೊನೆಯ ಪದರದವರೆಗೂ ಮುಟ್ಟಿ ಏಟನ್ನು ಕೊಟ್ಟು ಈ ಜನಾಂಗದವರು ನಿದ್ದೆಯಲ್ಲೂ ನರಳಾಡಿಸುವಂತೆ ಮಾಡಿರುವುದು. ಹೀಗಾಗಿ ಆ ಈ ಜನಾಂಗಗಳೆರಡೂ ಇಂದಿನ ವ್ಯವಸ್ಥೆಯ ಜೀವನರೀತಿಯಲ್ಲಿ ಮೈಮನಸ್ಸು ಮುದುರಿಕೊಂಡು ಪಾಲ್ಗೊಳ್ಳುತ್ತಿರುವುವು. ಇವರು ಗರಿಗೆದರಿ ಸಂಪೂರ್ಣ ಮನಸ್ಸಿನಿಂದ ಹಾರಾಟ ನಡೆಸಿದ್ದಿಲ್ಲ. ದಲಿತರನ್ನು ಅವಮಾನಿತರನ್ನಾಗಿಸಿಯೋ ಮುಸ್ಲಿಮರನ್ನು ಅನುಮಾನಿತರನ್ನಾಗಿಸಿಯೋ ಇಟ್ಟು ಇಂದಿನ ವ್ಯವಸ್ಥೆ ಅವರನ್ನು ತನ್ನೊಳಗೆ ಸೇರಿಸಿಕೊಳ್ಳದೆ ಒಂದು ಗೊತ್ತಾದ ದೂರದಲ್ಲಿರಿಸಿಕೊಂಡು ಬರುತ್ತಿರುವುದು ಅದರ ಲಕ್ಷಣವಾಗಿದೆ.

ಹಾಗಾದರೆ ಏನರ್ಥ ? ದೊಡ್ಡ ದೊಡ್ಡ ನಾಯಕರುಗಳು ಇಂದಿನ ವ್ಯವಸ್ಥೆಯಲ್ಲೂ ಆ ಈ ಜನಾಂಗಗಳಲ್ಲೂ ಇರುವವರಲ್ಲ ? ಹಾಗಾದರೆ ಏನರ್ಥ ? ಸ್ವಲ್ಪವೇ ಕಣ್ಣು ತೆರೆದು ನೋಡಿ – ಈ ಎರಡೂ ಜನಾಂಗಗಳ ಪ್ರತಿನಿಧಿಗಳು ಎಂಥೆಂಥ ಸ್ಥಾನಗಳಲ್ಲಿ ಇರುವರ ? ಈ ಮೂಲತಃ ಹಲ್ಲು ಇಲ್ಲದ ಆದರೆ ಹೆಸರಿಗೆ ದೊಡ್ಡದಾಗಿರುವ ಸ್ಥಾನಗಳಲ್ಲಿ ಇದ್ದಿರುವರು. ಆ ಈ ಜನಾಂಗಗಳವರು ಮೇಲ್ಕಂಡಂಥ ದೊಡ್ಡ ಸ್ಥಾನಗಳಿಗೆ ಬರುವವರಿಗೆ ಅಕಸ್ಮತ್ತು ಹಲ್ಲೇನಾರು ಇದ್ದರೆ ಅದನ್ನು ಕಳಚಿಟ್ಟು ತದನಂತರ ದೊಡ್ಡ ಸ್ಥಾನದಲ್ಲಿ ಪವಡಿಸುವರು. ಅವರು ಮರೆತೂ ಹಲ್ಲಾಡಿಸಿದರೂ ಒಂದಾ ಹಲ್ಲು ಕಳೆದುಕೊಳ್ಳುವರು ಇಲ್ಲವೇ ಆ ದೊಡ್ಡ ಸ್ಥಾನ ಕಳೆದುಕೊಳ್ಳುವರು. ಇಂಥವು ನಮಗೆ ಕಾಣಿಸದೆ ಕಂಡು ಎಷ್ಟೊ ಆಗುತ್ತಲಿವೆ. ಇಂದಿನ ವ್ಯವಸ್ಥೆಯು ಈ ಜನಾಂಗಗಳ ನಾಯಕರಿಗೆ ಪಂಪು ಹೊಡೆದು ಊದಿಸಿ ಆಯಾಯ ಜನಾಂಗಗಳಿಗೆ ತೋರಿಸಲು ಇಟ್ಟುಕೊಂಡಂಥಹ ಸರಕುಗಳಾಗಿವೆ. ಹೀಗೆ ಇಂದಿನ ವ್ಯವಸ್ಥೆ ಈ ಎರಡೂ ಜನಾಂಗಗಳ ಆಯ್ದ ವ್ಯಕ್ತಿಗಳನ್ನು ಉಬ್ಬಿಸಿಕೊಂಡು ತನ್ನ ಕೈಯಲ್ಲಿ ಇಟ್ಟುಕೊಂಡು ಆಡಿಸುತ್ತ ಬಂದಿರುವುದು. ಇದರಿಂದಾಗಿ ಈ ಎರಡೂ ಜನಾಂಗಗಳ ಮಹಾಜನತೆ ಇದ್ದಲ್ಲೇ ಇದ್ದು ನಿದ್ದೆ ಮಾಡುತ್ತ ಬಂದಿದೆ.

ದಲಿತರಂತೆಯೆ ಮುಸ್ಲಿಮರೂ ನಿದ್ದೆ ಮಾಡುತ್ತಿರುವ ಜನಾಂಗ ಎಂಬ ಕಾರಣಕ್ಕಾಗೋ, ದಲಿತರಂತೆಯೆ ಮುಸ್ಲಿಮರೂ ಮನಸ್ಸಿನ ಕ್ರೂರ ನರಳಾಟಕ್ಕೆ ತುತ್ತಾದವರು ಎಂಬ ಕಾರಣಕ್ಕಾಗೋ, ದಲಿತರಂತೆ ಮುಸ್ಲಿಮರೂ ದನ ತಿನ್ನುವರೆಂಬ ಕಾರಣಕ್ಕಾಗೋ, ದಲಿತರಂತೆಯೇ ಮುಸ್ಲಿಮರೂ ದೇಶವ್ಯಾಪ್ತಿ ಜನತೆ ಎಂಬ ಕಾರಣಕ್ಕಾಗೋ, ದಲಿತರೊಡನೆ ಇನ್ನಾರು ಕುಸ್ತಿ ಮಾಡದಿದ್ದಾಗ ಮುಸ್ಲಿಮ ತಮ್ಮೊಡನೆ ಕುಸ್ತಿ ಮಾಡುವರೆಂಬ ಕಾರಣಕ್ಕಾಗೋ, ದಲಿತರಂತೆಯೇ ಮುಸ್ಲಿಮರಿಗೂ ಮಕ್ಕಳು ಜಾಸ್ತಿ ಎಂಬ ಕಾರಣಕ್ಕಾಗೋ, ಕಾರ್ಖಾನೆ ಉತ್ಪಾದಿಸುವ ಕೊಳಚೆ ಪ್ರದೇಶಗಳಿಗೆ ಬಂದರೆ ಕಡುಬಡತನದ ದವಡೆಗೆ ಎಸೆಯಲ್ಪಟ್ಟವರು ದಲಿತರಂತೆಯೇ ಮುಸ್ಲಿಮರೂ ಹೆಚ್ಚು ಎಂಬಕಾರಣಕ್ಕಾಗೋ, ಎಚ್ಚೆತ್ತ ದಲಿತರು ಹಿಂದೂ ಧರ್ಮ ದ್ವೇಷಿಸುವುದರಿಂದ ನಮ್ಮ ಶತ್ರುವಿನ ಶತ್ರು ಮಿತ್ರ ಎಂಬ ಕಾರಣಕ್ಕಾಗೋ, ದಲಿತರನ್ನು ಕುಗ್ಗಿಸುವ ಅಸ್ಪೃಶ್ಯತಾ ಆಚರಣೆ ಮುಸ್ಲಿಮರಲ್ಲಿ ಇಲ್ಲ (ಇದ್ದರೂ ಅದು ಹಿಂದುಗಳಲ್ಲಿರುವಂತೆ ರಕ್ತಗತವಾದದ್ದಲ್ಲ, ಹಿಂದೂ ಸಮಾಜದಲ್ಲಿ ಪ್ರತಿಷ್ಠೆ ಉಳಿಸಿಕೊಳ್ಳಲೋ ಆರ್ಥಿಕ ಅನುಕೂಲಕ್ಕಾಗೋ, ಆಚರಣೆಗೆ ಇರುವಂಥದ್ದು) ಎಂಬ ಕಾರಣಕ್ಕಾಗೋ ದಲಿತ ಜನತೆ ಮುಸ್ಲಿಮರೊಡನೆ ಹೆಚ್ಚೆಚ್ಚು ಹೊಂದುತ್ತಾ ಬಂದಿದೆ.

ಆದ್ದರಿಂದ ಅಲ್ಲೊಬ್ಬ ಸಿರಿವಂತರನ್ನು ಸಾಮಾನ್ಯವಾಗಿ ದುಡ್ಡು ಮಾಡಿಕೊಳ್ಳುವ ಮುಖಂಡರುಗಳನ್ನು ಬಿಟ್ಟರೆ ಬಹುತೇಕ ಬಡವರನ್ನು ಒಳಗೊಂಡ ಈ ಎರಡೂ ಬಹುಸಂಖ್ಯಾತ ಜನಾಂಗಗಳ ಒಕ್ಕೂಟದೊಡನೆ ಜಾತಿರಹಿತ ಸಮಾಜದ ಕಡೆಗೆ ನಡೆಯಲು ಈ ಎರಡೂ ಜನಾಂಗಗಳ ಎಚ್ಚೆತ್ತವರು ಹಾಗೂ ಜಾತಿರಹಿತ ಸಮಾಜಕ್ಕಾಗಿ ಹೋರಾಡುವವರು ಯತ್ನಿಸುವವರೆ ? ಎಂಬುದರ ಮೇಲೂ ಜಾತಿ ವರ್ಗ ಸಮಾಜದ ದೂರ ನಿಂತಿನೆ.

–ಕಿಡಿಗೇಡಿ

ದಾಖಲೆಗಳು

1975ನೇ ಜನವರಿಯಿಂದ ಕನ್ನಡ ದೈನಿಕ ಪತ್ರಿಕೆಗಳಲ್ಲಿ ಸಂಗ್ರಹಿಸಿದ ದಲಿತರ ಮೇಲಿನ ದೌರ್ಜನ್ಯಗಳು,
(ಕಳೆದ ಸಂಚಿಕೆಗಳಿಂದ ಮುಂದುವರೆದುದು)

2. 6. 75. ಚಿಕ್ಕಮಗಳೂರು: ಆಲ್ದೂರುಸಮೀಪದ ಕನಕನಗುಂಡಿಯ ಹರಿಜನ ಪೂವಯ್ಯನ ಮನೆಗೆ ಸವರ್ಣೀಯರಿಂದ ಬೆಂಕಿ.

*

4. 6. 75, ಪಟನಾ: ಬೋಜಪುರ ಜಿಲ್ಲೆ ಹದಿಯಾಬಾದ್‌ನಲ್ಲಿ ಇಪ್ಪತ್ತಾರು ಹರಿಜನ ಕುಟುಂಬಗಳವರನ್ನು ತಂತಮ್ಮ ಮನೆಗಳಲ್ಲೇ ಕೂಡಿಹಾಕಿ ಜಮೀನ್ದಾರರು ಅವಕ್ಕೆ ಬೆಂಕಿಹಚ್ಚಿದರು. ಒಬ್ಬಮಾತ್ರ ಬೆಂಕಿಯಲ್ಲಿ ಸುಟ್ಟು ಸತ್ತು ಹೋದ, ಸಕಾಲದಲ್ಲಿ ಪೋಲೀಸ್ ಪಡೆಯಿಂದ ಎಲ್ಲ ಪಾರಾದರು.

*

17. 6. 75, ತುಮಕೂರು ತಾಲ್ಲೋಕು ಹೊನ್ನುಡಿಕೆಯಲ್ಲಿ ಕೆರೆ ಅಂಗಳ ಉಳುಮೆ ಮಾಡುವ ವಿವಾದದಲ್ಲಿ ಅಣ್ಣಯ್ಯ ಮತ್ತಿತರ ಹರಿಜನರ ಮೇಲೆ ಸವರ್ಣೀಯರ ಹಲ್ಲೆ.

*

27. 6. 75, ಮಂಗಳೂರು: ಬಂಟ್ವಾಳದ ಆರ್ಲ ಗ್ರಾಮದಲ್ಲಿ ಯಮುನಾ ಎಂಬ ಹುಡುಗಿ ಹಾಗೂ ಇನ್ನು ಮೂವರು ಹರಿಜನರ ಮೇಲೆ ಹಲ್ಲೆ, ಇಲ್ಲಿನ ಸಬ್ ಇನ್ಸ್‌ಪೆಕ್ಟರ್‌ರಿಂದ.

*

16. 12. 75, ಬಾಗೆಪಲ್ಲಿ: ಇಲ್ಲಿನ ಗೂಳೂರು ಹೋಬಳಿ ನಲಪರೆಡ್ಡಿ ಪಲ್ಲಿ ಗ್ರಾಮದಲ್ಲಿ ಜಮೀನ್ದಾರರ ಭೂಮಿಯಲ್ಲಿ ಕೂಲಿ ಕೆಲಸಕ್ಕಾಗಿ ಹರಿಜನ ಯುವತಿಯೊಬ್ಬಳು ಒಪ್ಪಿಕೊಂಡಿದ್ದು, ಅನಿರೀಕ್ಷಿತವಾಗಿ ಕೆಲಸಕ್ಕೆ ಹಾಜರಾಗದಿದ್ದ ಕಾರಣ ಆಕೆಯನ್ನು ಕರೆಸಿ ಜಮೀನ್ದಾರರು ಆಕ್ಷೇಪಿಸಿದರು. ಆಕೆ ತನಗಿದ್ದ ಅನಿವಾರ್ಯ ತೊಂದರೆಗಳನ್ನು ನಿವೇದಿಸಿಕೊಂಡರೂ ಸಹ ಜಮೀನ್ದಾರರು ಆಕೆ ಬಗ್ಗೆ ತುಚ್ಛವಾದ ಮಾತುಗಳನ್ನಾಡಿ ಆಕೆಯನ್ನು ಬೇರೆ ಕಡೆಗೆ ಕರೆದೊಯ್ದು ಮುಖಕ್ಕೆ ಸುಣ್ಣದ ಬಟ್ಟುಗಳನ್ನಿಟ್ಟು, ಕಿವಿಗೆ ಈರುಳ್ಳಿಗೆಡ್ಡೆ ತೂಗುಹಾಕಿ ಡಂಗುರ ಹೊಡೆಸಿ ಊರಲ್ಲಿ ಆಕೆಯನ್ನು ಅಪಮಾನಕರ ರೀತಿಯಲ್ಲಿ ಮೆರವಣಿಗೆ ಮಾಡಲಾಯಿತು.

ಸಂಪಾದಕ : ಇಂದೂಧರ ಹೊನ್ನಾಪುರ

ಜೊತೆಗೆ : ರಾಮದೇವ ರಾಕೆ
ಶಿವಾಜಿ ಗಣೇಶನ್
ಶಿವಮಲ್ಲ ದೇವನೂರು

ಪ್ರಕಾಶಕ : ಗೋವಿಂದಯ್ಯ

ಮುದ್ರಣ : ಆಂದೋಲನ ಮುದ್ರಣ
2649 | 2, ಕೆ. ಜಿ. ಕೊಪ್ಪಲು
ಮೈಸೂರು-9